NAGARAVANI 04-09-2021

# ಇಂದು ಬಿಐಇಟಿ.ಯಲ್ಲಿ ಟೆಕ್ನೋವೇಶನ್–21

(4ನೇ ಪುಟದಿಂದ) ಅದೇ ರೀತಿ ಕರ್ನಾಟಕ ಸರ್ಕಾರದ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ 10 ಯೋಜನೆಗಳಿಗೂ ಬೆಳಗಾವಿಯ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ 20 ಯೋಜನೆಗಳಿಗೂ ಅತ್ಯುತ್ತಮ ಯೋಜನೆಗಳೆಂದು ಗುರುತಿಸಿ ಹಣಕಾಸಿನ ನೆರವನ್ನು ನೀಡಿವೆ.

ಇದರ ಜೊತೆಯಲ್ಲಿ ಉತ್ತಮವಾದ 15 ಯೋಜನೆಗಳಿಗೆ ಬಿ.ಐ.ಇ.ಟಿ. ವತಿಯಿಂದ ಹಣಕಾಸಿನ ನೆರವನ್ನು ನೀಡಲಾಗಿದೆ. ಒಟ್ಟು ಸುಮಾರು 30 ಲಕ್ಷ ಹಣಕಾಸಿನ ನೆರವು ಈ ವರ್ಷ ವಿದ್ಯಾರ್ಥಿಗಳಿಗೆ ದೊರೆತಿದೆ . ವಿದ್ಯಾರ್ಥಿಗಳ ಈ ಸಾಧನೆಯ ಉಪಯುಕ್ತತೆಯನ್ನು ಸಾರ್ವಜನಿಕರಿಗೆ ತಿಳಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸೆ.4 ರ ಇಂದು ಬೆಳಿಗ್ಗೆ 10.30 ಕ್ಕೆ ಬಿ.ಐ.ಇ.ಟಿ ಆವರಣದ ಎಸ್.ಎಸ್ ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ . ಈ ಎಲ್ಲಾ ಯೋಜನೆಗಳ ಬೃಹತ್ ಪ್ರದರ್ಶನವನ್ನು ಏರ್ಪಡಿಸಲಾಗಿದೆ . ಈ ಪ್ರದರ್ಶನದಲ್ಲಿ ಅತ್ಯುತ್ತಮವಾದ 60 ಯೋಜನೆಗಳು ಪ್ರದರ್ಶಿತಗೊಳ್ಳಲಿವೆ ಎಂದು ತಿಳಿಸಿದ್ದಾರೆ.

# ಇಂದು ಬಿಐಇಟಿ.ಯಲ್ಲಿ ಟೆಕ್ನೋವೇಶನ್–21

ದಾ.ನಗರವಾಣಿ ಸುದ್ದಿ

ದಾವಣಗೆರೆ: ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ತಯಾರಿಸಿರುವ ನವೀನ ಹಾಗೂ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳ ಪ್ರದರ್ಶನ ಟೆಕ್ನೋವೇಶನ್–21 ಅನ್ನು ಸೆ.4 ರ ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜು ಆವರಣದ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಮುದಿಗೌಡ್ರ ಮತ್ತು ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್.ಹೊಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾಲೇಜಿನ ಅಂತಿಮ ವರ್ಷದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಪ್ರಸ್ತುತ ವರ್ಷ ಇಂಥಹ ಅನೇಕ ನವೀನ ಹಾಗೂ ಸಮಾಜಕ್ಕೆ ಉಪಯುಕ್ತವಾಗುವ ಯೋಜನೆಗಳನ್ನು ರೂಪಿಸಿ ಸಮಾಜಕ್ಕೆ ಕೊಡುಗೆಯಾಗಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕೊರೊನಾ ಸಂಕಷ್ಟದ ದಿನಗಳಲ್ಲಿ ವಿದ್ಯಾರ್ಥಿಗಳ ಈ ಸಾಧನೆ ಮೆಚ್ಚುವಂಥಹುದು ಎಂದು ಕಾಲೇಜು ಪ್ರಾಂಶುಪಾಲ ಡಾ.ಎಚ್.ಬಿ.ಅರವಿಂದ ಮತ್ತು ಆಡಳಿತ ಮಂಡಳಿ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ತಿಳಿಸಿದ್ದಾರೆ.

ಪ್ರಸ್ತುತ ವರ್ಷ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು 24 ಪ್ರಸ್ತಾವನೆಗಳನ್ನು ಅತ್ಯುತ್ತಮವೆಂದು ಪರಿಗಣಿಸಿ ಹಣಕಾಸಿನ ನೆರವು ನೀಡಿದೆ. (3ನೇ ಪುಟಕ್ಕೆ)

VIJAYAKARNATAKA 04-09-2021

# ಶಬ್ಧ ತರಂಗಗಳಿಂದ ಹಣ್ಣಿನ ತಾಳಿಕೆ ಗುಣ ಹೆಚ್ಚಳ!

## ಬಿಐಇಟಿ ಕಾಲೇಜು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರಯೋಗ

**ವಿಕ ಸುದ್ದಿಲೋಕ** ದಾವಣಗೆರೆ

ಮಾವು, ಟಮ್ಯಾಟೊ ಶೇಖರಿಸುವ ಬಾಕ್ಸ್‌ಗಳ ಶಬ್ದ ತರಂಗಗಳ ಹರಡಿಸುವ ಮೂಲಕ ಹಣ್ಣಿನ ತಾಳಿಕೆ ಗುಣ ಹೆಚ್ಚಿಸುವ ನೂತನ ಪ್ರಯೋಗವೊಂದನ್ನು ಬಾಪೂಜಿ ಇನ್‌ಸ್ಟಿಟ್ಯೂಟ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಮೆಕ್ಯಾನಿಕಲ್ ವಿದ್ಯಾರ್ಥಿಗಳು ಮಾಡಿದ್ದಾರೆ.

ಈ ನೂತನ ಪ್ರಯೋಗಕ್ಕೆ ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಎಂಜಿನಿಯರಿಂಗ್ ಫೌಂಡೇಷನ್‌ನಿಂದ ಇತ್ತೀಚೆಗೆ ಧಾರವಾಡದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಮಾರ್ಗದರ್ಶನ ಮತ್ತು ನಾಯಕತ್ವ ಕೌಶಲ್ಯ ಹೆಚ್ಚಿಸುವ ಉದ್ದೇಶದಿಂದ ನಡೆದ ನಾನಾ ತಂತ್ರಜ್ಞಾನಗಳ ತರಬೇತಿ, ಪ್ರಾದೇಶಿಕ ಮಟ್ಟದ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿದೆ.

ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಎ.ಎಸ್. ಶರಣ್, ಡಾ.ಕೆ. ಸದಾಶಿವಪ್ಪ ಅವರ ಮಾರ್ಗದರ್ಶನದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ರುಕಿಯಾ, ಮೆಹ್ವಿಶ್, ಎಸ್. ಸುಮಾ ಮತ್ತು ಮಂಜುಳಾ 'ಹಣ್ಣು ಸಂರಕ್ಷಣಾ ಸ್ಮಾರ್ಟ್ ವ್ಯವಸ್ಥೆ' ಯೋಜನೆ ರೂಪಿಸಿದ್ದಾರೆ. ಈ ವಿಭಾಗದ ಮುಖ್ಯಸ್ಥ ಡಾ. ಜೆ. ಮಹೇಂದ್ರ ಸಾಧನೆಯನ್ನು ಅಭಿನಂದಿಸಿದ್ದಾರೆ.



ಹಣ್ಣು ಸಂರಕ್ಷಣೆಗೆ ಸ್ಮಾರ್ಟ್ ವ್ಯವಸ್ಥೆ ತಂತ್ರಜ್ಞಾನ ರೂಪಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳು, ಪ್ರಾಧ್ಯಾಪಕರನ್ನು ಪ್ರಾಚಾರ್ಯ ಅರವಿಂದ್ ಅಭಿನಂದಿಸಿದರು.

### ತಾಂತ್ರಿಕ ಯೋಜನೆಗಳ ಪ್ರದರ್ಶನ

ಬಿಐಇಟಿಯ ಎಸ್‌ಎಸ್ ಮಲ್ಲಿಕಾರ್ಜುನ ಸಭಾಂಗಣದಲ್ಲಿ ಸೆ. 4 ರ ಬೆಳಗ್ಗೆ 10.30 ಕ್ಕೆ ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನ ನಡೆಯಲಿದೆ. ವಿದ್ಯಾರ್ಥಿಗಳು ನವೀನ ಹಾಗೂ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳನ್ನು ಪ್ರದರ್ಶಿಸಲಿದ್ದಾರೆ. ಉನ್ನತ ಶಿಕ್ಷಣ ಇಲಾಖೆ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ಕಾಲೇಜು ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಹೊಳಿ ಅತಿಥಿಗಳಾಗಿದ್ದಾರೆ.

**ಮಾತನಾಡುವ ಮಾವು:** ಹಣ್ಣು, ಟೊಮ್ಯಾಟೊ ಕಾಯಿಯ ಹಂತದಲ್ಲಿದ್ದು ಹಣ್ಣಾಗುವಾಗ ಹಿತಲಿನ್ ಬಿಡುಗಡೆ ಮಾಡುತ್ತವೆ. ಹಿತಲಿನ್ ಹೆಚ್ಚು ಬಿಡುಗಡೆ ಮಾಡಿದರೆ ಬೇಗ ಹಣ್ಣಾದರೆ ಸಂರಕ್ಷಣೆ (ತಾಳಿಕೆ) ಅವಧಿ ಕೂಡ ಕಡಿಮೆ ಆಗಲಿದೆ. ಕಾಯಿಯ ಹಂತದಿಂದ ಹಣ್ಣಾಗುವಾಗ ಹಿತಲಿನ್ ಬಿಡುಗಡೆ ಮಾಡುವ ವಿಜ್ಞಾನವನ್ನೇ ಬಳಸಿಕೊಂಡು ಈ ಪ್ರಯೋಗ ಮಾಡಲಾಗಿದೆ. ಹಿತಲಿನ್ ಬಿಡುಗಡೆ ಮಾಡುವ ಪ್ರಮಾಣ ಕಡಿಮೆ ಮಾಡಿ ನಿಧಾನವಾಗಿ ಹಣ್ಣಾಗುವಂತೆ, ತಾಳಿಕೆ ಗುಣ ಹೆಚ್ಚಿಸುವ ಪ್ರಯೋಗವನ್ನು ಮಾಡಿದ್ದಾರೆ.

> ಹಣ್ಣು ಸಂರಕ್ಷಣೆಗೆ ಸ್ಮಾರ್ಟ್ ವ್ಯವಸ್ಥೆ ತಂತ್ರಜ್ಞಾನ ರೈತರಿಗೆ ಬಹಳ ಅನುಕೂಲ ಆಗಲಿದೆ. ಈ ರೀತಿಯ ಮೂರು ಯೋಜನೆಗಳನ್ನು ನಮ್ಮ ವಿದ್ಯಾರ್ಥಿಗಳು ರೂಪಿಸಿದ್ದಾರೆ.
>
> **-ಅರವಿಂದ್**, ಪ್ರಾಚಾರ್ಯ, ಬಿಐಇಟಿ

- ಹಣ್ಣು ಸಂರಕ್ಷಣೆಗೆ ಸ್ಮಾರ್ಟ್ ವ್ಯವಸ್ಥೆ
- ಶಬ್ದ ತರಂಗಕ್ಕೆ ಮಾವು ಮಾತನಾಡುತ್ತದೆ

ಹಣ್ಣುಗಳನ್ನು ಶೇಖರಿಸಿಡುವ ಬಳಿ ಸ್ಪೀಕರ್ ಅಳವಡಿಸಿ ಮೊಬೈಲ್ ಮೂಲಕ 1000 ಹರ್ಟ್ಸ್ ಫ್ರೀಕ್ವೆನ್ಸಿಯ ಅಲ್ಟ್ರಾ ಸಾನಿಕ್ ಸೌಂಡ್ ಹರಿಬಿಡಲಾಗುತ್ತದೆ. ಶಬ್ದ ತರಂಗಗಳಿಗೆ ಹಣ್ಣುಗಳು ಮಾತನಾಡುತ್ತವೆ. ದಿನಕ್ಕೆ 3 ಗಂಟೆಯಂತೆ 8 ದಿನ ಈ ರೀತಿ ಶಬ್ದ ತರಂಗ ಹರಡಿಸಿದರೆ ಹಣ್ಣುಗಳ ತಾಳಿಕೆ ಗುಣ ಹೆಚ್ಚುತ್ತದೆ ಎಂದು ಮಾರ್ಗದರ್ಶಕರಲ್ಲಿ ಒಬ್ಬರಾದ ಡಾ.ಎ.ಎಸ್. ಶರಣ್ ಪ್ರಯೋಗದ ಬಗ್ಗೆ ಮಾಹಿತಿ ನೀಡಿದರು.

JANATHAVANI 04-05-2021

# ನಗರದ ಬಿಐಇಟಿಯಲ್ಲಿ ಇಂದು ಅತ್ಯುತ್ತಮ 60 ಯೋಜನೆಗಳ ಪ್ರದರ್ಶನ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ತಯಾರಿಸಿರುವ ನವೀನ ಹಾಗೂ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳ ಪ್ರದರ್ಶನ ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನವನ್ನು ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜು ಆವರಣದ ಎಸ್.ಎಸ್.ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಮುದಿಗೌಡ್ರ ಮತ್ತು ಯುಬಿಡಿಟಿ ಕಾಲೇಜಿನ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್.ಹೊಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪ್ರಸ್ತುತ ವರ್ಷ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು 24 ಪ್ರಸ್ತಾವನೆಗಳನ್ನು ಅತ್ಯುತ್ತಮವೆಂದು ಪರಿಗಣಿಸಿ ಹಣಕಾಸಿನ ನೆರವು ನೀಡಿದೆ. ಅದೇ ರೀತಿ ಕರ್ನಾಟಕ ಸರ್ಕಾರದ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ 10 ಯೋಜನೆಗಳಿಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ 20 ಯೋಜನೆಗಳಿಗೂ ಅತ್ಯುತ್ತಮ ಯೋಜನೆಗಳೆಂದು ಗುರುತಿಸಿ ಹಣಕಾಸಿನ ನೆರವನ್ನು ನೀಡಿವೆ.

ಇದರ ಜೊತೆಯಲ್ಲಿ ಉತ್ತಮವಾದ 15 ಯೋಜನೆಗಳಿಗೆ ಬಿಐಇಟಿ ವತಿಯಿಂದ ಹಣಕಾಸಿನ ನೆರವನ್ನು ನೀಡಲಾಗಿದೆ. ಒಟ್ಟು ಸುಮಾರು 30 ಲಕ್ಷ ಹಣಕಾಸಿನ ನೆರವು ಈ ವರ್ಷ ವಿದ್ಯಾರ್ಥಿಗಳಿಗೆ ದೊರೆತಿದೆ. ವಿದ್ಯಾರ್ಥಿಗಳ ಈ ಸಾಧನೆಯ ಉಪಯುಕ್ತತೆಯನ್ನು ಸಾರ್ವಜನಿಕರಿಗೆ ತಿಳಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಎಲ್ಲಾ ಯೋಜನೆಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಪ್ರದರ್ಶನದಲ್ಲಿ ಅತ್ಯುತ್ತಮವಾದ 60 ಯೋಜನೆಗಳು ಪ್ರದರ್ಶಿತಗೊಳ್ಳಲಿವೆ ಎಂದು ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಬಿ.ಅರವಿಂದ್ ಮತ್ತು ಆಡಳಿತ ಮಂಡಳಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ತಿಳಿಸಿದ್ದಾರೆ.

### ಗಣ್ಯರ ಮೆಚ್ಚುಗೆಗೆ ಪಾತ್ರವಾದ ಬಿಐಇಟಿಯಲ್ಲಿ ಪ್ರದರ್ಶನಗೊಂಡ 60 ಪ್ರಾಜೆಕ್ಟ್‌ಗಳು

# ನವೀನ ಆವಿಷ್ಕಾರಗಳ ಪ್ರದರ್ಶಿಸಿದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕುರುಡು ಮತ್ತು ಕಿವುಡು ಸಮಸ್ಯೆ ಇರುವವರಿಗೆ ಕಂಪಿಸುವ ಕೋಲು, ಟ್ರಾಫಿಕ್ ಸಿಗ್ನಲ್ ಪೂರ್ವ ತುರ್ತು ವಾಹನಗಳು, ಡ್ರೈ ರನ್ನಿಂಗ್ ವ್ಯಾನ್ ಟೈಪ್ ವ್ಯಾಕ್ಯೂಮ್ ಪಂಪ್, ಪರಿಸರ ಸ್ನೇಹಿ ಸ್ಯಾನಿಟರಿ ನ್ಯಾಪ್‌ಕಿನ್, ಖಿನ್ನತೆ ಪರಿಹರಿಸುವ ಯಂತ್ರ, ಚರಂಡಿ ನೀರನ್ನು ಗೊಬ್ಬರವಾಗಿಸುವ ಯಂತ್ರ..

ಬಿಐಇಟಿ ಸಂಸ್ಥೆಯ ಬಿಐಇಟಿ ಆವರಣದ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ 'ಟೆಕ್ನೋವೇಷನ್-21' ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದ ವಿದ್ಯಾರ್ಥಿಗಳು ಪ್ರದರ್ಶಿಸಿದ ವಿವಿಧ ನವೀನ ಆವಿಷ್ಕಾರಗಳು ಇವು.

ಹುಣಸೆ ಹಣ್ಣಿನ ಬೀಜಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಮೌಲ್ಯವರ್ಧನೆಯೊಂದಿಗೆ ಬಳಸುವ ಯೋಜನೆ, ಸ್ವಯಂ ಚಾಲಿತ ಪಡಿತರ ವಿತರಕ ಯಂತ್ರ, ರೋಬೋಟ್ ಮೂಲಕ ಸೀಗಡಿ ಮೀನುಗಾರಿಕೆ ಹೀಗೆ ಒಟ್ಟು 60 ಆವಿಷ್ಕಾರಗಳನ್ನು ಪ್ರದರ್ಶಿಸಿ ಅವುಗಳ ಬಗ್ಗೆ ವಿವರ ನೀಡಿದರು. ಅತಿಥಿಗಳು, ತಜ್ಞರು ಅವುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದಾಗ ವಿದ್ಯಾರ್ಥಿಗಳ ಕಣ್ಣಲ್ಲಿ ಸಂಭ್ರಮದ ಹೊಳಪು ಸೂಸಿತು.

ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್.ಹೊಳಿ ಟೆಕ್ನೋವೇಷನ್‌ಗೆ ಚಾಲನೆ ನೀಡಿದರು.



ಬಿಐಇಟಿಯಲ್ಲಿ ಶನಿವಾರ ನವೀನ ಆವಿಷ್ಕಾರಗಳ ಬಗ್ಗೆ ಅತಿಥಿಗಳಿಗೆ ವಿದ್ಯಾರ್ಥಿಗಳು ವಿವರಿಸಿದರು.

ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ.ಅರವಿಂದ, 'ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶಿಕ್ಷಣದಲ್ಲಿ ಅನೇಕ ವಿಷಯ ಅಧ್ಯಯನ ಮಾಡುತ್ತಾರೆ. ಅಂತಿಮವಾಗಿ ಈ ಎಲ್ಲಾ ವಿಷಯಗಳ ಜ್ಞಾನವನ್ನು ವಿವಿಧ ಯೋಜನೆಗಳನ್ನು ರೂಪಿಸಿ ನವೀನ ಆವಿಷ್ಕಾರಗಳಿಗೆ ಕಾರಣರಾಗಿದ್ದಾರೆ. ಬಿಐಇಟಿ ಅಂತಿಮ ವರ್ಷದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಕೊರೊನಾ ಸಂಕಷ್ಟದ ನಡುವೆಯೂ ಅನೇಕ ನವೀನ ಹಾಗೂ ಸಮಾಜಕ್ಕೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ ಸಮಾಜಕ್ಕೆ ಕೊಡುವೆಯಾಗಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದು ಶ್ಲಾಘಿಸಿದರು.

ಪ್ರಸ್ತುತ ವರ್ಷ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಯು 24 ಪ್ರಸ್ತಾವನೆ ಅತ್ಯುತ್ತಮ ಎಂದು ಪರಿಗಣಿಸಿ ಹಣಕಾಸು ನೆರವು ನೀಡಿದೆ. ಅದೇ ರೀತಿ ರಾಜ್ಯ ಸರ್ಕಾರದ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ 10 ಯೋಜನೆ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 20 ಅತ್ಯುತ್ತಮ ಯೋಜನೆಗಳು ಎಂದು ಗುರುತಿಸಿ ಹಣಕಾಸಿನ ನೆರವು ನೀಡಿವೆ. ಜೊತೆಗೆ ಉತ್ತಮ 15 ಯೋಜನೆಗಳಿಗೆ ಬಿಐಇಟಿಯಿಂದ ಹಣಕಾಸಿ ನೆರವು ಸೇರಿ ವಿದ್ಯಾರ್ಥಿಗಳಿಗೆ ಒಟ್ಟು ₹ 30 ಲಕ್ಷ ಆರ್ಥಿಕ ನೆರವು ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಬಿಐಇಟಿ ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ, ಭರತ್ ಅದ್ವಾನಿ, ಡಾ.ಪೂರ್ಣಿಮಾ ಅವರೂ ಇದ್ದರು.

## ಪ್ರಾಣಿ ಬಂದರೆ ಎಚ್ಚರಿಸುವ ಯಂತ್ರ

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಇಂಟರ್ನೆಟ್ ಆಫ್ ಥಿಂಗ್ಸ್ ಮೂಲಕ ಕೃಷಿ ಭೂಮಿ ರಕ್ಷಣೆಗೆ ಕಾಡು ಪ್ರಾಣಿ ಪತ್ತೆ ಮತ್ತು ಎಚ್ಚರಿಸುವ ವ್ಯವಸ್ಥೆ ಕುರಿತು ತಯಾರಿಸಿದ ಪ್ರಾಜೆಕ್ಟ್ ಗಮನ ಸೆಳೆಯಿತು.

ಮಲೆನಾಡು ಭಾಗದಲ್ಲಿ ಕೃಷಿ ಭೂಮಿಗೆ ಆನೆ ದಾಳಿ ಮತ್ತು ಕಾಡು ಪ್ರಾಣಿಗಳ ದಾಳಿಯಿಂದ ಬೆಳೆನಾಶ ಮತ್ತು ಜೀವಹಾನಿ ತಪ್ಪಿಸಲು ಈ ತಂತ್ರಜ್ಞಾನದಿಂದ ಸಾಧ್ಯ ಎಂದು ವಿದ್ಯಾರ್ಥಿಗಳಾದ ಅನನ್ಯ ಮಲಾಡ್ಕರ್, ಅರವಿಂದ್ ಚೌಧರಿ, ಸಂದೀಪ್ ಸದಾಶಿವ ನೇರ್ಲಿಕರ್, ಪಿ.ಎಸ್.ಮಹೇಶ್ ವಿವರಿಸಿದರು.

ಬೆಳೆಹಾನಿ ಮತ್ತು ಜೀವಹಾನಿ ಮಾಡುವ ಕಾಡು ಪ್ರಾಣಿಗಳನ್ನು ಗುರುತಿಸಿ, ಛಾಯಾಚಿತ್ರ ತೆಗೆದು ಕೃಷಿ ಭೂಮಿಯ ಮಾಲೀಕರಿಗೆ ಈ-ಮೇಲ್ ರವಾನಿಸುತ್ತದೆ. ಕಾಡು ಪ್ರಾಣಿಯ ಇರುವಿಕೆಯ ಬಗ್ಗೆ ಜೋರಾಗಿ ಅಲಾರಮ್ ಸದ್ದು ಮೊಳಗಿಸುತ್ತದೆ. ಈ ಯೋಜನೆಗೆ ರಾಸ್ಪ್‌ಬೆರಿ ಪೈ ಎಂಬ ಕ್ರೆಡಿಟ್ ಕಾರ್ಡ್ ಗಾತ್ರದ ಚಿಕ್ಕ ಗಣಕಯಂತ್ರ ಬಳಸಲಾಗಿದೆ. ಕಾಡು ಪ್ರಾಣಿಗಳ ಚಟುವಟಿಕೆಯನ್ನು ಗಮನಿಸಲು ಪ್ಯಾಸಿವ್ ಇನ್ಫ್ರಾರೆಡ್ ಸಂವೇದಕ ಉಪಯೋಗಿಸಲಾಗಿದೆ ಎಂದು ಮಾಹಿತಿ ನೀಡಿದರು.

# ಸಮಾಜಮುಖಿ ಆವಿಷ್ಕಾರಗಳ ಅನಾವರಣ

## ಬಿಐಇಟಿ ಕಾಲೇಜಿನಲ್ಲಿ 'ಟೆಕ್ನೋವೇಷನ್-21' ಆಯೋಜನೆ | ವಿದ್ಯಾರ್ಥಿಗಳಿಂದ ಅರವತ್ತು ಪ್ರಾಜೆಕ್ಟ್‌ಗಳ ಪ್ರದರ್ಶನ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಕಾಡಿನಿಂದ ನಾಡಿಗೆ ನುಗ್ಗುವ ಪ್ರಾಣಿಗಳ ಚಲನವಲನ ಪತ್ತೆಹಚ್ಚಿ ಎಚ್ಚರಿಸುವ ವ್ಯವಸ್ಥೆ, ಹಾಲಿನ ಗುಣಮಟ್ಟ ಪರೀಕ್ಷೆ, ಪಡಿತರ ವಿತರಣೆಯಲ್ಲಿ ಕ್ಯೂಆರ್ ಕೋಡ್ ಬಳಕೆ, ಚರಂಡಿ ನೀರಿನಿಂದ ಸಾವಯವ ಗೊಬ್ಬರ, ಅಡಕೆ ಹಾಳೆಯಿಂದ ಬ್ಯಾಗ್‌ಗಳ ತಯಾರಿಕೆ.

ನಗರದ ಬಿ.ಐ.ಇ.ಟಿ ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ, 'ಟೆಕ್ನೋವೇಷನ್-21'ನಲ್ಲಿ ಇಂಥ ಹಲವು ಪ್ರಾಜೆಕ್ಟ್‌ಗಳು ಗಮನ ಸೆಳೆದವು. ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಈ ಆವಿಷ್ಕಾರಗಳು ಸಮಾಜಮುಖಿಯಾಗಿದ್ದು ರೈತರು, ಜನಸಾಮಾನ್ಯರ ಬದುಕಿಗೆ ನೆರವಾಗುವಂತಿವೆ.

ಕ್ಯೂಆರ್ ಕೋಡ್ ಆಧಾರಿತ ಪಡಿತರ ವ್ಯವಸ್ಥೆಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಅಳವಡಿಸುವುದು, ಧ್ವನಿ ಆಧಾರಿತ ಸ್ಮಾರ್ಟ್ ಬೆಡ್‌ಗಳು, ಕೃಷಿಯಲ್ಲಿ ರೋಬೋಟ್‌ಗಳ ಬಳಕೆ, ಕಿವುಡ, ಮೂಗರಿಗೆ ದೃಶ್ಯ, ಶ್ರವಣ ಮಾಧ್ಯಮದ ಮೂಲಕ ಮಾಹಿತಿ ನೀಡುವುದು ಸೇರಿದಂತೆ 60 ಪ್ರಾಜೆಕ್ಟ್ ಗಳು ಪ್ರದರ್ಶನಗೊಂಡವು. ಜಲಸಿರಿ ಯೋಜನೆಯ ಮಾದರಿ ಆಕರ್ಷಕವಾಗಿತ್ತು.

ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ ಪ್ರದರ್ಶನವನ್ನು ಉದ್ಘಾಟಿಸಿದರು. ಯು.ಬಿ.ಡಿ.ಟಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಹೊಳಿ, ಬಿ.ಐ.ಇ.ಟಿ. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ, ಪ್ರಾಧ್ಯಾಪಕ ಡಾ. ಜಿ.ಪಿ. ದೇಸಾಯಿ ಇತರರು ಇದ್ದರು.

ವಿಜಯವಾಣಿ ಚಿತ್ರ



ದಾವಣಗೆರೆಯ ಬಿಐಇಟಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಟೆಕ್ನೋವೇಷನ್-21'ನಲ್ಲಿ ಜಲಸಿರಿ ಯೋಜನೆಯ ಮಾದರಿಯನ್ನು ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ, ಯು.ಬಿ.ಡಿ.ಟಿ. ಕಾಲೇಜಿನ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಹೊಳಿ, ಬಿ.ಐ.ಇ.ಟಿ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ ವೀಕ್ಷಿಸಿದರು.

### ಅಡಕೆ ಹಾಳೆಯಿಂದ ಬ್ಯಾಗ್ ತಯಾರಿಕೆ

ರೈತರಿಗೆ ಅನುಪಯುಕ್ತವಾದ ಅಡಕೆ ಹಾಳೆಯಿಂದ ವಿದ್ಯಾರ್ಥಿಗಳು ಬ್ಯಾಗ್‌ಗಳನ್ನು ಸಿದ್ಧಪಡಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕೆಮಿಕಲ್ ಟ್ರೀಟ್‌ಮೆಂಟ್ ಮತ್ತು ಹೀಟ್ ಟ್ರೀಟ್‌ಮೆಂಟ್ ವಿಧಾನ ಅನುಸರಿಸಲಾಗಿದೆ. ಗ್ಲಿಸರಿನ್ ಮತ್ತು ಬೇವಿನಎಣ್ಣೆಯನ್ನು ಉಪಯೋಗಿಸಲಾಗಿದೆ ಎಂದು ವಿದ್ಯಾರ್ಥಿಗಳಾದ ಸುನಿಲ್‌ಕುಮಾರ್ ಮತ್ತು ಮಂಜುನಾಥ್ ಮಾಹಿತಿ ನೀಡಿದರು.

### ಹಾಲಿನ ಕಲಬೆರಕೆ ಪತ್ತೆ

ಹಾಲಿನ ಕಲಬೆರಕೆಯನ್ನು ಪತ್ತೆ ಹಚ್ಚುವುದು ಹೇಗೆ ಎಂಬುದನ್ನು ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ. ಸೆನ್ಸರ್‌ಗಳನ್ನು ಬಳಸಿ, ಇಂಟರ್‌ನೆಟ್ ಆಧರಿತ ವ್ಯವಸ್ಥೆಯಲ್ಲಿ ಹಾಲಿನ ಗುಣಮಟ್ಟವನ್ನು ತಿಳಿಯಲು ಇದರಿಂದ ಸಹಾಯಕವಾಗುತ್ತದೆ. ಹಾಲಿನ ಡೇರಿಗಳಲ್ಲಿ, ಕ್ಷೀರ ಉದ್ಯಮದಲ್ಲಿ ಈ ತಂತ್ರಜ್ಞಾನವು ನೆರವಿಗೆ ಬರುತ್ತದೆ. ವಿದ್ಯಾರ್ಥಿಗಳಾದ ಡಿ. ಕಾರ್ತಿಕ್, ಎನ್. ಪ್ರವೀಣ್, ಆರ್.ಎಸ್. ಪ್ರೇರಣಾ, ಎ.ಆರ್. ಪೂಜಾ ಈ ಪ್ರಾಜೆಕ್ಟ್ ಸಿದ್ಧಪಡಿಸಿದ್ದಾರೆ.

### ಸ್ಮಾರ್ಟ್ ನೀರಾವರಿ ವ್ಯವಸ್ಥೆ

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ರೈತರ ಕೆಲಸವನ್ನು ಸುಗಮಗೊಳಿಸುವ ವಿಧಾನವನ್ನು ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ. ಇದರಲ್ಲಿ ಸೆನ್ಸರ್‌ಗಳು ಮತ್ತು ಮೊಬೈಲ್ ಬಳಸಲಾಗಿದೆ. ಬೆಳೆಗಳಿಗೆ ಎಷ್ಟು ನೀರು ಬೇಕು, ತೇವಾಂಶ ಎಷ್ಟಿರಬೇಕು ಎಂಬುದನ್ನು ಅಳೆದು, ತೂಗಿ, ಅಷ್ಟೇ ಪ್ರಮಾಣದಲ್ಲಿ ಒದಗಿಸುವುದು ಇದರ ವಿಶೇಷವಾಗಿದೆ.

### ಚರಂಡಿ ನೀರಿನಿಂದ ಸಾವಯವ ಗೊಬ್ಬರ

ಚರಂಡಿ ನೀರಿನಿಂದ ದ್ರವರೂಪಿ ಸಾವಯವ ಗೊಬ್ಬರ ತಯಾರಿಸುವ ವಿಧಾನವನ್ನು ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ. ಮೊದಲಿಗೆ ಚರಂಡಿ ನೀರಿನಲ್ಲಿರುವ ಕಸ, ಕಡ್ಡಿಗಳನ್ನು ತೆಗೆಯಲಾಗುತ್ತದೆ. ಹಾಟ್ ಪ್ಲಾಸ್ಮಾ ಮತ್ತು ಕೋಲ್ಡ್ ಪ್ಲಾಸ್ಮಾ ಟ್ರೀಟ್‌ಮೆಂಟ್ ಮೂಲಕ ಸಾವಯವ ಗೊಬ್ಬರ ತಯಾರಿಸಲಾಗುತ್ತದೆ. ಇದರಿಂದ ಇಳುವರಿ ಹೆಚ್ಚಾಗುತ್ತದೆ. ಕೀಟ ಅಥವಾ ರೋಗ ಬಾಧೆಯೂ ಇರುವುದಿಲ್ಲ ಎಂದು ವಿದ್ಯಾರ್ಥಿಗಳಾದ ಆಶಿಶ್, ಮಂಜುಳಾ, ಅಭಿಷೇಕ್, ಅಲೋಕ್ ತಿಳಿಸಿದರು.

### ಗಡಿಯಲ್ಲಿ ಶತ್ರುವಿನ ಮೇಲೆ ನಿಗಾ

ಅಲ್ಟ್ರಾಸೋನಿಕ್ ಸೆನ್ಸರ್‌ಗಳನ್ನು ಬಳಸಿ, ದೇಶದ ಗಡಿಯಲ್ಲಿ ಶತ್ರುಗಳು ನುಸುಳುವುದನ್ನು ಪತ್ತೆಹಚ್ಚುವ ತಂತ್ರಜ್ಞಾನವು ಗಮನ ಸೆಳೆಯಿತು. ಕ್ಯಾಮರಾಗಳಲ್ಲಿ ಸೆರೆಯಾಗುವ ದೃಶ್ಯಗಳು ಕಂಪ್ಯೂಟರ್ ಪರದೆಯ ಮೇಲೆ ಮೂಡುತ್ತವೆ. ಆದರಿಂದ ಸೈನಿಕರು ಜಾಗೃತರಾಗಿ ವೈರಿಗಳನ್ನು ಹಿಮ್ಮೆಟ್ಟಿಸಲು ಸಹಾಯಕವಾಗುತ್ತದೆ. ಭರತ್ ಬೆಳಗಾವಿ, ಭಾರ್ಗವ್ ಇನ್ನಿತರ ವಿದ್ಯಾರ್ಥಿಗಳು ಈ ಪ್ರಾಜೆಕ್ಟ್ ಮಾಡಿದ್ದಾರೆ.

### ಜನರ ಮೇಲೆ ನಿಗಾ ಇಡಲು ಉಪಕರಣ

ಕೋವಿಡ್ ಆತಂಕ ಇನ್ನೂ ದೂರವಾಗಿಲ್ಲ. ಸರ್ಕಾರದ ಮಾರ್ಗಸೂಚಿಗಳನ್ನು ಎಲ್ಲರೂ ಪಾಲಿಸಬೇಕಿದೆ. ಆದರೆ ಜನನಿಬಿಡ ಪ್ರದೇಶಗಳಲ್ಲಿ ಇದರ ಮೇಲೆ ನಿಗಾ ಇಡುವುದು ಹೇಗೆ? ಕಾಲೇಜಿನ ವಿದ್ಯಾರ್ಥಿಗಳು ಇದಕ್ಕೆ ಉತ್ತರ ಹುಡುಕಿದ್ದು ಉಪಕರಣವೊಂದನ್ನು ಆವಿಷ್ಕರಿಸಿದ್ದಾರೆ. ಜನಸಂದಣಿ ಹೆಚ್ಚಿರುವ ಸ್ಥಳಗಳಲ್ಲಿ ಅದನ್ನು ಅಳವಡಿಸಿದರೆ, ಮಾಸ್ಕ್ ಹಾಕದವರು, ದೇಹದ ಉಷ್ಣಾಂಶ ಸಾಮಾನ್ಯಕ್ಕಿಂತ ಹೆಚ್ಚಿರುವವರು, ಉಸಿರಾಟದ ತೊಂದರೆ ಇರುವವರನ್ನು ಪತ್ತೆಹಚ್ಚಬಹುದು. ಕ್ಯಾಮರಾ, ಪಲ್ಸ್ ಆಕ್ಸಿಮೀಟರ್‌ಗಳನ್ನು ಅದರಲ್ಲಿ ಕೂಡಿಸಲಾಗಿರುತ್ತದೆ ಎಂದು ವಿದ್ಯಾರ್ಥಿ ಚಂದನ್ ಕಶ್ಯಪ್ ವಿವರಿಸಿದರು.

ವಿಜಯವಾಣಿ ಚಿತ್ರ



ದಾವಣಗೆರೆಯ ಬಿಐಇಟಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಟೆಕ್ನೋವೇಷನ್-21'ನಲ್ಲಿ ವಿದ್ಯಾರ್ಥಿಗಳು, ಕಾಡು ಪ್ರಾಣಿಗಳ ಚಲನವಲನ ಪತ್ತೆ ಹಚ್ಚುವ ಪ್ರಾಜೆಕ್ಟ್ ಪ್ರದರ್ಶಿಸಿದರು. ಸಹಾಯಕ ಪ್ರಾಧ್ಯಾಪಕ ಕೆ. ಗಣೇಶ್ ಇದ್ದರು.

### ಕಾಡು ಪ್ರಾಣಿಗಳ ಚಲನವಲನ ಪತ್ತೆ

ಕಾಡು ಪ್ರಾಣಿಗಳು ನಾಡಿಗೆ ಬಂದು ಕೃಷಿ ಭೂಮಿಯ ಮೇಲೆ ಲಗ್ಗೆ ಇಡುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗಿವೆ. ಆನೆ, ಚಿರತೆ, ಕರಡಿ ಮುಂತಾದ ವನ್ಯಜೀವಿಗಳ ಉಪಟಳದಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಬೆಳೆ ನಷ್ಟದ ಜತೆಗೆ ಜೀವ ಹಾನಿಯೂ ಆಗುತ್ತಿದೆ. ಇದನ್ನು ಮನಗಂಡು ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಆವಿಷ್ಕರಿಸಿದ್ದಾರೆ. ಜಮೀನುಗಳಲ್ಲಿ ಕ್ಯಾಮರಾ ಮತ್ತು ಸೆನ್ಸರ್‌ಗಳನ್ನು ಅಳವಡಿಸಲಾಗುತ್ತದೆ. ಕಾಡು ಪ್ರಾಣಿಗಳು ಹಾದು ಹೋದರೆ ಅಲಾರ್ಮ್ ಸದ್ದಾಗುತ್ತದೆ. ಆ ಪ್ರಾಣಿಗಳ ಛಾಯಾಚಿತ್ರ ತೆಗೆದು ರೈತನ ಇ-ಮೇಲ್ ವಿಳಾಸಕ್ಕೆ ರವಾನಿಸಲಾಗುತ್ತದೆ. ಈ ಪ್ರಾಜೆಕ್ಟ್ ಅನ್ನು ವಿದ್ಯಾರ್ಥಿಗಳಾದ ಅನನ್ಯಾ ಮಲಾಡ್ಕರ್, ಅರವಿಂದ ಚೌಧರಿ, ಸಂದೀಪ್ ಸದಾಶಿವ ನೇರ್ಲೀಕರ್, ಪಿ.ಎಸ್. ಮಹೇಶ್ ಅವರು ತಯಾರಿಸಿದ್ದು, ವಿಭಾಗದ ಮುಖ್ಯಸ್ಥೆ ಡಾ. ಜಿ.ಎಸ್. ಸುನಿತಾ, ಸಹಾಯಕ ಪ್ರಾಧ್ಯಾಪಕ ಕೆ. ಗಣೇಶ್ ಮಾರ್ಗದರ್ಶನ ನೀಡಿದ್ದಾರೆ.

## ಬಿಐಇಟಿ ವಿದ್ಯಾರ್ಥಿಗಳಿಂದ ಸಾಮಾಜಿಕ ಪ್ರಸ್ತುತಿ ಯೋಜನೆಗಳ ಪ್ರದರ್ಶನ

# 60 ಪ್ರಾಜೆಕ್ಟ್‌ಗಳ ಮೇಳೈಸಿದ ಟೆಕ್ನೋವೇಷನ್-21

**ವಿಕ ಸುದ್ದಿಲೋಕ** ದಾವಣಗೆರೆ


ಕೊರೊನಾ ಲಾಕ್ಡೌನ್ ಸಂದರ್ಭದಲ್ಲಿ ಬಹುತೇಕ ಎಲ್ಲ ಕಾಲೇಜುಗಳು ಬಂದ್ ಆಗಿದ್ದು, ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಎಂಜಿನಿಯರಿಂಗ್ ಫೈನಲ್ ಸೆಮ್‌ಲ್ಲಿದ್ದ ವಿದ್ಯಾರ್ಥಿಗಳು ಮಾತ್ರ ತಮ್ಮ ಪ್ರಾಜೆಕ್ಟ್ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು, ಶನಿವಾರ ಬಿಐಇಟಿ ಕಾಲೇಜಿನಲ್ಲಿ ಪ್ರಸ್ತುತಗೊಂಡವು.

ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಿವಿಲ್ ವಿಭಾಗದಲ್ಲಿನ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿದ್ದು, ಟೆಕ್ನೋವೇಷನ್ - 21ರಲ್ಲಿ ನೋಡುಗರಿಗೆ ಇಟ್ಟಿದ್ದರು. ಹಲವು ಪ್ರಾಜೆಕ್ಟ್‌ಗಳು ಸಾಮಾಜಿಕ ಪ್ರಸ್ತುತಿಯನ್ನು ಹೊಂದಿದ್ದವು. 60 ಪ್ರಾಜೆಕ್ಟ್‌ಗಳ ಮೇಳವೇ ಟೆಕ್ನೋವೇಷನ್-21ಆಗಿದ್ದು, ವಿದ್ಯಾರ್ಥಿಗಳ ಹೊಸ ಬಗೆಯ ತಾಂತ್ರಿಕ ಆವಿಷ್ಕಾರಗಳು ಹುಬ್ಬೇರಿಸುವಂತಿದ್ದವು. ಅಲ್ಲದೆ ಕೋವಿಡ್ ತರುವಾಯದ ತಾಂತ್ರಿಕ ಕ್ರಾಂತಿಯ ಮೊದಲ ಹೆಜ್ಜೆಯಾಗಿಯೂ ಗಮನ ಸೆಳೆಯಿತು.

ಸಾರ್ವಜನಿಕರಿಗೆ ಬೇಕಾದ ಅಗತ್ಯ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಸಜ್ಜುಗೊಳಿಸಬೇಕಾದುದು ವಿಜ್ಞಾನ ಮತ್ತು ತಂತ್ರಜ್ಞಾನಕ್ಕಿರುವ ಸವಾಲಾಗಿದ್ದು, ಆ ಸವಾಲು ವಿದ್ಯಾರ್ಥಿಗಳ ಕೈಚಳಕದಲ್ಲಿ ಮೂಡಿತ್ತು. ಸ್ಥಳೀಯ ಮೆಕ್ಕೆಜೋಳ, ಅಡಕೆಯನ್ನು ಬಳಸಿದ ಸಿದ್ಧವಸ್ತುಗಳು, ಉಷ್ಣ ವಿದ್ಯುತ್ ಸ್ಥಾವರದ ಹಾರು ಬೂದಿಯಿಂದ ಇಟ್ಟಿಗೆ, ಪ್ಲಾಸ್ಟಿಕ್ ಪೂರಕ ಹಾಗೂ ಅಡಕೆ ಸಿಪ್ಪೆಯ ನಾರಿನ ಸ್ಯಾನಿಟರಿ ನ್ಯಾಪ್ಕಿನ್ ಸೇರಿ ಹಲವು ಆವಿಷ್ಕಾರಗಳು ವಿದ್ಯಾರ್ಥಿಗಳ ಪರಿಸರ ಕಾಳಜಿಗೆ ಸಾಕ್ಷಿಯಾಗಿದ್ದವು.

ಮೀನುಗಾರಿಕೆಗೆ ವಿವಿಧ ತಂತ್ರಜ್ಞಾನದ ಅಧುನಿಕತೆ ಟಚ್ ನೀಡಿ ಇದರಲ್ಲಿ ನೀರಿನ ಪಿಎಚ್ ಮಟ್ಟ, ಆಮ್ಲಜನಕ ಹಾಗೂ ತಾಪಮಾನ ಮಾಹಿತಿ ಸಂಗ್ರಹಿಸಿ ಎಚ್ಚರಿಕೆ ನೀಡುವ ವ್ಯವಸ್ಥೆ. ಭೂಮಿಯ ತೇವಾಂಶ ಅಳೆಯುವ ಸಾಧನ.

ವಿದ್ಯಾರ್ಥಿಗಳ ಕೈಚಳಕಲ್ಲಿ ತಯಾರಾದ ಮಿನಿ ರೋಬಟ್ ಮಾದರಿ ಯಂತ್ರಗಳು..ಅಡಕೆ ಪಟ್ಟಿಗಳನ್ನು ಬಳಸಿ ಹ್ಯಾಂಡ್ ಬ್ಯಾಗ್, ಆನ್ ಲೈನ್ ತರಗತಿಯಲ್ಲಿ ವಿದ್ಯಾರ್ಥಿಗಳ ತೊಡಗಿಕೊಳ್ಳುವಿಕೆ ಕಂಡುಹಿಡಿಯುವ ಸಾಧನ, ಕೋವಿಡ್ ಹರಡದಂತೆ ಮುನ್ನೆಚ್ಚರಿಕೆ ವಿಶಿಷ್ಟ ಬ್ಯಾಂಡ್ ಹಾಗೂ ದತ್ತಾಂಶ ಸಂಗ್ರಹಿಸುವ ಸಾಫ್ಟ್‌ವೇರ್, ಸಸ್ಯಗಳಿಗೆ ಕೀಟ ತಪ್ಪಿಸಲು ಹಾಗೂ ಇಳುವರಿ ಹೆಚ್ಚಿಸಲು ಹಣ್ಣಿನ ಸಿಪ್ಪೆಗಳಿಂದ ತಯಾರಿಸಿದ ಕೀಟನಾಶಕ ಹಾಗೂ ಗ್ರೋಥ್ ಟಾನಿಕ್. ಹೀಗೆ ಹತ್ತು ಹಲವು ಬಗೆ ನವೀನ ಆವಿಷ್ಕಾರದ ಯೋಜನೆ ಮಾದರಿಗಳು ಬಿಐಇಟಿ ಕಾಲೇಜಿನ ಆವರಣದಲ್ಲಿ ಕಂಡು ಬಂದವು. ಒಟ್ಟಾರೆ ಒಂದಕ್ಕಿಂತ ಒಂದು ಹೊಸ ನವನವೀನ ಆವಿಷ್ಕಾರ ವಿದ್ಯಾರ್ಥಿಗಳ ಕೈ ಚಳಕದಲ್ಲಿ ತಯಾರಾಗಿದ್ದವು. ಜನರಲ್ಲಿ ವೈಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆಸಕ್ತಿ ಹೆಚ್ಚಿಸಬಹುದುದಾದ ಬಾಪೂಜಿ ಇಂಜಿನೀಯರಿಂಗ್ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯದ ಉಪಕ್ರಮವು ಇನ್ನಿತರ ಸಂಸ್ಥೆಗಳಿಗೂ ಮಾದರಿಯಂತಿತ್ತು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮ್ಮ ಪ್ರಾಜೆಕ್ಟ್ ಬಗ್ಗೆ ತಿಳಿಸುತ್ತಿರುವ ವಿದ್ಯಾರ್ಥಿಗಳು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕುತೂಹಲದಿಂದ ಪ್ರಾಜೆಕ್ಟ್ ಬಗ್ಗೆ ತಿಳಿದುಕೊಳ್ಳುತ್ತಿರುವುದು.

### ಪ್ರದರ್ಶನಕ್ಕೆ ಚಾಲನೆ

**ರಾಜ್ಯ ಉನ್ನತ ಶಿಕ್ಷಣ ಇಲಾಖೆ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ ಟೆಕ್ನೋವೇಶನ್ -21 ಉದ್ಘಾಟಿಸಿದರು. ಯು.ಬಿ.ಡಿ.ಟಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಹೊಳಿ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಇದ್ದರು. ಆಯಾ ವಿಭಾಗಗಳ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಸ್ತುತಿಯ ಡೆಮೋ ತೋರಿಸಿದರು.**

### ಹಣಕಾಸಿನ ನೆರವು

**ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ 24, ನ್ಯೂಏಜ್ ಇನ್ಕ್ಯುಬೇಷನ್ ನೆಟ್ವರ್ಕ್‌ನಿಂದ 10, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ 20 ಹಾಗೂ ಬಿಐಇಟಿ ಕಾಲೇಜಿನಿಂದ 15 ಪ್ರಾಜೆಕ್ಟ್‌ಗಳಿಗೆ ಒಟ್ಟು 60 ಲಕ್ಷ ರೂಪಾಯಿ ಪ್ರೋತ್ಸಾಹಧನ ದೊರೆತಿದೆ. ವಿದ್ಯಾರ್ಥಿಗಳಲ್ಲಿನ ಸಂಶೋಧನಾ ಪ್ರವೃತ್ತಿ ಜಾಗೃತಗೊಳಿಸುವ ಹಿನ್ನೆಲೆ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು ಎಂದು ಬಾಪೂಜಿ ತಾಂತ್ರಿಕ ಕಾಲೇಜಿನ ಸಾರ್ವಜನಿಕ ಸಂಪರ್ಕಾಧಿಕಾರಿ ಜೆ.ಪಿ.ದೇಸಾಯಿ ಹೇಳಿದ್ದಾರೆ.**

## ಹಾಲಿನ ಕಲಬೆರಕೆ ತಿಳಿಯುವ ಇನ್ನೊಂದು ಸಾಧನ

ಗರಿಷ್ಠ ಪೋಷಕಾಂಶ ಇರುವ ಹಾಲಿನಲ್ಲಿ ನೀರು ಮತ್ತಿತರ ಕಲಬೆರಕೆ ಕಂಡುಕೊಳ್ಳಬಹುದಾದ ಇನ್ನೊಂದು ಸಾಧನವನ್ನು ನಗರದ ಬಿಐಇಟಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಂಡು ಹಿಡಿದಿದ್ದಾರೆ. ಕಾಲೇಜಿನ ಆಡಿಟೋರಿಯಂನಲ್ಲಿ ಸಜ್ಜುಗೊಳಿಸಲಾದ ನೂರಾರು ಪ್ರದರ್ಶನದಲ್ಲಿ ಇದೂ ಒಂದು. ಇಂಟರ್ ನೆಟ್ ಸಂಪರ್ಕದ ಐಒಟಿ ತಂತ್ರಜ್ಞಾನ ಆಧಾರದಲ್ಲಿ ಇಲೆಕ್ಟ್ರಾನಿಕ್ ಹಾಗೂ ಕಮ್ಯುನಿಕೇಶನ್ ವಿಭಾಗದ ಡಾ. ಜಿ. ಎಸ್. ಸುನಿತಾ ಮಾರ್ಗದರ್ಶನದಲ್ಲಿ ನಾಲ್ವರು ವಿದ್ಯಾರ್ಥಿಗಳು ಇದನ್ನು ಸಿದ್ಧಪಡಿಸಿದ್ದಾರೆ.

ಯಾವುದೇ ಹಾಲಿನ ನಮೂನೆಯನ್ನು ಇವರು ಸಿದ್ಧಪಡಿಸಿದ ಸಾಧನದಲ್ಲಿ ಇಟ್ಟರೆ ಹಾಲಿನಲ್ಲಿ ನೀರು ಬೆರೆಸಲಾಗಿದೆಯೇ, ಅಮೋನಿಯಾ ಮತ್ತಿತರ ರಾಸಾಯನಿಕ ವಿದೆಯೇ ಎಂಬುದಷ್ಟೇ ಅಲ್ಲ, ಇದರ ಪಿಎಚ್ ಗುಣಮಟ್ಟ, ಸಾಂದ್ರತೆ ಮತ್ತು ವಾಸನೆಯಲ್ಲಿ ವ್ಯತ್ಯಾಸವಾದರೂ ಈ ಸಾಧನವು ಕಂಡು ಹಿಡಿಯುತ್ತದೆ. ಇದೊಂದು ಪ್ರಯೋಗಾಲಯ ಸಾಧನಾಗಿದ್ದು, ಗಾತ್ರ ಹಾಗೂ ಸೆನ್ಸಾರ್ ಗುಣಮಟ್ಟದಲ್ಲಿ ಇನ್ನಷ್ಟು ಬಳಕೆಗೆದಾರ ಪೂರಕವಾಗಿ ಮಾರ್ಪಡಿಸಬೇಕಿದೆ ಎಂದು ಪ್ರದರ್ಶನದಲ್ಲಿನ ವಿದ್ಯಾರ್ಥಿಗಳು ಹೇಳಿದ್ದಾರೆ. ಪ್ರಾಜೆಕಸ್ಟ ಸಿದ್ಧಪಡಿಸಿದ ವಿದ್ಯಾರ್ಥಿಗಳ ಗುಂಪಿನಲ್ಲಿ ಕಾರ್ತಿಕ್ ಧೂಲಶೆಟ್ಟಿ, ಪ್ರವೀನ ಎನ್, ಪ್ರೇರಣಾ ಆರ್. ಎಸ್, ಹಾಗೂ ಪೂಜಾ ಎ ಆರ್ ಅವರಿದ್ದಾರೆ. ಉತ್ತಮ ಗುಣ ಹಾಗೂ ಕಳಪೆ ಹಾಲಿನ ನಮೂನೆಯಲ್ಲಿ ವಿದ್ಯುತ್ ಪ್ರವಹಿಸಿದಾಗ ಇಲೆಕ್ಟ್ರಾನಿಕ್ ಫಲಕದಲ್ಲಿ ಅಂಕಿ ಸಂಖಿಗಳ ಮೂಲಕ ಗುಣಮಟ್ಟ ದಾಖಲಿಸುವುದನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳು ತೋರಿಸಿದರು.



**ಹಾಲಿನ ಕಲಬೆರಕೆ ಕಂಡುಹಿಡಿವ ಸಾಧನದೊಂದಿಗೆ ವಿದ್ಯಾರ್ಥಿನಿ.**

ಉದಂತವಾಣಿ, ದಾವಣಗೆರೆ
5/9/2021

**ಕೆಎಸ್‌ಸಿಎಸ್‌ಟಿಯಿಂದ 24 ಪ್ರಸ್ತಾವನೆಗಳಿಗೆ ಹಣಕಾಸು ನೆರವು: ಡಾ। ಎಚ್.ಬಿ. ಅರವಿಂದ**

# ಬಾಪೂಜಿ ಎಂಜಿನಿಯರಿಂಗ್ ಕಾಲೇಜಲ್ಲಿ ಟೆಕ್ನೋವೇಷನ್‌ಗೆ ಚಾಲನೆ

**ದಾವಣಗೆರೆ:** ಇಲ್ಲಿನ ಬಾಪೂಜಿ ಹಾಗೂ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳ ನವೀನ ಹಾಗೂ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳ ಪ್ರದರ್ಶನ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ನಡೆಯಿತು.

ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ। ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ। ಮಲ್ಲಿಕಾರ್ಜುನ ಎಸ್. ಹೊಳಿ ಟೆಕ್ನೋವೇಷನ್‌ಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಬಿ. ಅರವಿಂದ, ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶಿಕ್ಷಣದಲ್ಲಿ ಅನೇಕ ವಿಷಯ ಅಧ್ಯಯನ ಮಾಡಿ ಅಂತಿಮವಾಗಿ ಈ ಎಲ್ಲ ವಿಷಯಗಳ ಜ್ಞಾನವನ್ನು ವಿವಿಧ ಯೋಜನೆಗಳನ್ನು ರೂಪಿಸಿ ನವೀನ ಆವಿಷ್ಕಾರಗಳಿಗೆ ಕಾರಣರಾಗಿದ್ದಾರೆ. ಬಿಐಇಟಿ ಅಂತಿಮ ವರ್ಷದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಕೊರೊನಾ ಸಂಕಷ್ಟದ ನಡುವೆಯೂ ಅನೇಕ ನವೀನ ಹಾಗೂ ಸಮಾಜಕ್ಕೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ ಸಮಾಜಕ್ಕೆ ಕೊಡುಗೆಯಾಗಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಶ್ಲಾಘಿಸಿದರು.



ದಾವಣಗೆರೆ: ಪ್ರಾಯೋಗಿಕ ಯೋಜನೆಗಳ ಪ್ರದರ್ಶನಕ್ಕೆ ಗಣ್ಯರು ಚಾಲನೆ ನೀಡಿದರು.

ಪ್ರಸ್ತುತ ವರ್ಷ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು (ಕೆಎಸ್‌ಸಿಎಸ್‌ಟಿ) 24 ಪ್ರಸ್ತಾವನೆ ಅತ್ಯುತ್ತಮ ಎಂದು ಪರಿಗಣಿಸಿ ಹಣಕಾಸು ನೆರವು ನೀಡಿದೆ. ಅದೇ ರೀತಿ ರಾಜ್ಯ ಸರ್ಕಾರದ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್ವರ್ಕ್ 10 ಯೋಜನೆ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ 20 ಅತ್ಯುತ್ತಮ ಯೋಜನೆಗಳು ಎಂದು ಗುರುತಿಸಿ ಹಣಕಾಸಿನ ನೆರವು ನೀಡಿವೆ. ಜೊತೆಗೆ ಉತ್ತಮ 15 ಯೋಜನೆಗಳಿಗೆ ಬಿಐಇಟಿಯಿಂದ ಹಣಕಾಸು ನೆರವು ಸೇರಿ ಒಟ್ಟು 30 ಲಕ್ಷ ರೂ. ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಇಂದು ನಡೆದ ಟೆಕ್ನೋವೇಷನ್ ಪ್ರದರ್ಶನದಲ್ಲಿ ಒಟ್ಟು 60 ಯೋಜನೆಗಳು ಪ್ರದರ್ಶಿತಗೊಂಡಿವೆ ಎಂದು ಮಾಹಿತಿ ನೀಡಿದರು.

ಬಿಐಇಟಿ ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಪ್ರೊ। ವೈ. ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ। ಜೆ.ಪಿ. ದೇಸಾಯಿ, ಭರತ್ ಆದ್ವಾನಿ, ಡಾ। ಪೂರ್ಣಿಮಾ ಮತ್ತಿತರರು ಇದ್ದರು.



ದಾವಣಗೆರೆ: ವಿದ್ಯಾರ್ಥಿಗಳು ತಮ್ಮ ಪ್ರಾಯೋಗಿಕ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

## ಗಮನ ಸೆಳೆದ ಪ್ರದರ್ಶನ

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಇಂಟರ್ನೆಟ್ ಆಫ್ ಥಿಂಗ್ಸ್ ಮೂಲಕ ಕೃಷಿ ಭೂಮಿ ರಕ್ಷಣೆಗೆ ಕಾಡು ಪ್ರಾಣಿ ಪತ್ತೆ ಮತ್ತು ಎಚ್ಚರಿಸುವ ವ್ಯವಸ್ಥೆ ಕುರಿತಂತೆ ತಯಾರಿಸಿದ ಪ್ರದರ್ಶನ ಗಮನ ಸೆಳೆಯಿತು. ಅದೇ ರೀತಿ ಕುರುಡು ಮತ್ತು ಕಿವುಡರಿಗೆ ವಿನ್ಯಾಸಗೊಳಿಸಿದ ಕಂಪಿಸುವ ಕೋಲು, ಪರಿಸರ ಸ್ನೇಹಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಅಭಿವೃದ್ಧಿ ಹುಣಸೆ ಹಣ್ಣಿನ ಬೀಜಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಮೌಲ್ಯವರ್ಧನೆಯೊಂದಿಗೆ ಬಳಸುವ ಯೋಜನೆ, ಸ್ವಯಂಚಾಲಿತ ಪಡಿತರ ವಿತರಕ, ಚರಂಡಿ ನೀರನ್ನು ಗೊಬ್ಬರವನ್ನಾಗಿಸಿ ಬೆಳೆಗಳಿಗೆ ಉಪಯೋಗಿಸುವುದು ಸೇರಿದಂತೆ ಒಟ್ಟು 60 ಯೋಜನೆಗಳ ಪ್ರದರ್ಶನ ಗಮನ ಸೆಳೆದವು.

# ಬಿಐಇಟಿ ವಿದ್ಯಾರ್ಥಿಗಳ 'ಆವಿಷ್ಕಾರ' ಅನಾವರಣ

## ಟೆಕ್ನೋವೇಷನ್-21ರಲ್ಲಿ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳ ಪ್ರದರ್ಶನ

ದಾವಣಗೆರೆ, ಸೆ.4- ನರ್ಸರಿಯಲ್ಲಿ ತಂತ್ರಜ್ಞಾನ ಬಳಕೆ, ಜಮೀನಿನ ಹಲವು ಕೆಲಸಗಳಿಗೆ ಒಂದೇ ರೋಬೋಟ್, ಕಾಡು ಪ್ರಾಣಿಗಳಿಂದ ಕೃಷಿ ಭೂಮಿ ರಕ್ಷಣೆಗೆ ಉಪಾಯ, ಆನ್‌ಲೈನ್ ಕಲಿಕೆಯಲ್ಲಿನ ವಿದ್ಯಾರ್ಥಿಗಳ ಗಮನ ಅಳೆಯವ ಕಲಿಕಾ ತರಂಗ, ಆತಿ ಕಡಿಮೆ ಬೆಲೆಯ ಪರಿಸರ ಸ್ನೇಹಿ ಅಡಿಕೆ ಬ್ಯಾಗ್...

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣ ದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಟೆಕ್ನೋವೇಷನ್-21 ರಲ್ಲಿ ಪ್ರದರ್ಶಿತಗೊಂಡ ಯೋಜನೆಗಳ ಪೈಕಿ ಇವು ಕೆಲವು ಮಾತ್ರ.

ಹೌದು, ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶಿಕ್ಷಣದಲ್ಲಿ ಅಭ್ಯಾಸ ಮಾಡಿದ ಜ್ಞಾನವನ್ನು ವಿವಿಧ ಯೋಜನೆಗಳನ್ನಾಗಿ ರೂಪಿಸಿ, ಕ್ರೋಢೀಕರಿಸಿ ನವೀನ ಆವಿಷ್ಕಾರಕ್ಕೆ ಕಾರಣೀ ಭೂತರಾಗಿದ್ದರು. ಸುಮಾರು 60 ವಿವಿಧ ಯೋಜನೆಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

**ಕಲಿಕೆಯ ತರಂಗ :** ಆನ್‌ಲೈನ್ ತರಗತಿಗಳಲ್ಲಿ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಗಮನಕೊಟ್ಟು ಕಲಿಯುತ್ತಿದ್ದಾರೆ? ಇದನ್ನು ಆಳೆಯಲು ಮಾಹಿತಿ ತಂತ್ರಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಚಿಂತನ ಹಾಗೂ ಚೈತಾಲಿ ಅವರು ಶೇಖ್ ಇಮ್ರಾನ್ ಅವರ ಮಾರ್ಗ ದರ್ಶನದಲ್ಲಿ ವ್ಯವಸ್ಥೆಯೊಂದನ್ನು ರೂಪಿಸಿದ್ದರು.

ಮೆದುಳಿನಿಂದ ಹೊರ ಹೊಮ್ಮುವ ಐದು ತರಂಗಗಳಲ್ಲಿ ಒಂದಾದ ಬೀಟಾ ಅಧ್ಯಯನ ಮಾಡುವ ಮೂಲಕ ಮಕ್ಕಳ ಗಮನ ಇದೆಯೇ ಎಂಬುದನ್ನು ಅಳೆಯಲು ತಂತ್ರಾಂಶ ರೂಪಿಸಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಪಾಠ ಗ್ರಹಿಸಲು ಸಾಧ್ಯವಾಗಿದೆ ಹಾಗೂ ಎಷ್ಟರ ಮಟ್ಟಿಗೆ ಗಮನ ಕೇಂದ್ರೀಕರಿಸುತ್ತಿದ್ದಾರೆ ಎಂಬುದನ್ನು ಅರಿಯಬಹುದು. ಬ್ಲೂ ಟೂತ್ ಆಧರಿತ ಈ ಉಪಕರಣ ಆರೋಗ್ಯಕ್ಕೆ ಸುರಕ್ಷಿತವಾಗಿದೆ ಎಂದು ಚಿಂತನ ಹಾಗೂ ಚೈತಾಲಿ ವಿವರಿಸಿದರು.

**ಹೊಲಕ್ಕೊಂದು ರೋಬೋ :** ಬಿತ್ತನೆ, ಕಟಾವು, ನೀರು ಹರಿಸುವುದು, ಉಳುಮೆ ಹಾಗೂ ಕಟಾವಿಗೆ ಬೇರೆ ಬೇರೆ ಯಂತ್ರದ ಬದಲು, ರೋಬೋ ಒಂದೇ ಸಾಕು ಎಂಬ ಪರಿಕಲ್ಪನೆಯಲ್ಲಿ ಅಗ್ರಿ ಬಾಟ್ ಒಂದನ್ನು ಮಾಹಿತಿ ತಂತ್ರಜ್ಞಾನ ವಿಜ್ಞಾನ ವಲಯದ ಮನೋಜ್ ಹಾಗೂ ಅಪೂರ್ವ ರೂಪಿಸಿದ್ದಾರೆ.

ತಮ್ಮ ತಂದೆ ಶಿರಸಿಯಲ್ಲಿ ಮೂರು ಎಕರೆ ಜಮೀನು ಹೊಂದಿದ್ದಾರೆ. ಹಲವಾರು ಯಂತ್ರಗಳನ್ನು ಖರೀದಿಸಲು ಆಗುವ ಕಷ್ಟವನ್ನು ಪರಿಗಣಿಸಿ, ಒಂದೇ ಯಂತ್ರದಿಂದ ಹಲವು ಕೆಲಸ ಮಾಡುವ ರೋಬೋಟ್ ರೂಪಿಸಿರುವುದಾಗಿ ಹೇಳಿದರು. ವಿದ್ಯಾರ್ಥಿನಿ ಅಪೂರ್ವ.

**ಪ್ರಾಣಿಗಳಿಂದ ಬೆಳೆ ನಾಶ ತಡೆಗೊಂದು ಉಪಾಯ:** ಕೃಷಿ ಭೂಮಿಗೆ ಆನೆ ಸೇರಿದಂತೆ ಕಾಡು ಪ್ರಾಣಿಗಳ ದಾಳಿ ಸಾಮಾನ್ಯ, ಇದರಿಂದ ಬೆಳೆ ನಾಶ ಹಾಗೂ ಜೀವ ಹಾನಿಯೂ ಉಂಟಾಗುತ್ತದೆ. ಇದರ ತಡೆಗೆ ಇಂಟರ್‌ನೆಟ್ ಆಫ್ ಥಿಂಗ್ಸ್ ತಂತ್ರಜ್ಞಾನ, ಯಂತ್ರ ಕಲಿಕೆ ಅಲ್ಗಾರಿದಂ ಮೂಲಕ ಬೆಳೆ ಹಾನಿ ಮತ್ತು ಜೀವ ಹಾನಿಯನ್ನು ತಡೆಯಲು ಕಾಡು ಪ್ರಾಣಿಗಳನ್ನು ಗುರುತಿಸಿ ಛಾಯಾಚಿತ್ರ ತೆಗೆದು ಭೂ ಮಾಲೀಕರಿಗೆ ಈ ಮೇಲ್ ರವಾನಿಸುವ ಜೊತೆಗೆ ಕಾಡು ಪ್ರಾಣಿ ಇರುವಿಕೆ ಬಗ್ಗೆ ಅಲಾರ್ಮ ಸದ್ದನ್ನೂ ಮೊಳಗಿಸುವ ತಂತ್ರಜ್ಞಾನದ ಅನ್ವೇಷಕರು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗದ ಅನನ್ಯ ಮಲಾಡ್ಕರ್, ಅರವಿಂದ ಛೌದರಿ ಇತರರು.

ಈ ಯೋಜನೆಗೆ ರಾಸ್ಬೆರಿ ಪೈ ಎಂಬ ಕ್ರೆಡಿಟ್ ಕಾರ್ಡ್ ಗಾತ್ರದ ಚಿಕ್ಕ ಗಣಕ ಯಂತ್ರವನ್ನು ಬಳಸಲಾಗಿದೆ. ಕಾಡು ಪ್ರಾಣಿಗಳ ಚಟುವಟಿಕೆ ಗಮನಿಸಲು ಪ್ಯಾಸಿವ್ ಇನ್ಫ್ರಾರೆಡ್ ಸಂವೇದಕ ಉಪಯೋಗಿಸಲಾಗಿದೆ. ಪೈಥಾನ್ ಪ್ರೋಗ್ರಾಂ ಮೂಲಕ ಸಂವೇದಕದ ಡೇಟಾ ವಿಶ್ಲೇಷಿಸಿ, ರಾಸ್ಬೆರಿ ಪೈ ಗಣಕಯಂತ್ರಕ್ಕೆ ಜೋಡಿಸಿರುವ ಕ್ಯಾಮೆರಾದಲ್ಲಿ ಕಾಡು ಪ್ರಾಣಿ ಚಿತ್ರ ಸೆರೆ ಹಿಡಿದು ಮಾಲೀಕನಿಗೆ ಈ ಮೂಲಕ ರವಾನಿಸುತ್ತದೆ.

**ಅಡಿಕೆ ಬ್ಯಾಗ್ :** ಪ್ಲಾಸ್ಟಿಕ್ ಬಳಕೆ ಹೆಚ್ಚಾಗುತ್ತಿರುವ ದಿನಗಳಲ್ಲಿ ಪರಿಸರ ಸ್ನೇಹಿ ಅಡಿಕೆ ಬ್ಯಾಗ್‌ಗಳನ್ನು ಅತಿ ಕಡಿಮೆ ಬೆಲೆಯಲ್ಲಿ ತಯಾರಿಸಿ ಉಪಯೋಗಿಸಬಹುದೆಂದು ತೋರಿಸಿಕೊಟ್ಟಿದ್ದು ಸಿವಿಲ್ ವಿಭಾಗದ ಸುನಿಲ್ ಕುಮಾರ್ ಹಾಗೂ ಮಂಜುನಾಥ್.

ಬಿಸಾಕಬಹುದಾದ ಅಡಿಕೆ ಮರದ ಮಟ್ಟೆಯನ್ನು ಅತಿ ಕಡಿಮೆ ಬೆಲೆಯಲ್ಲಿ ಖರೀದಿಸಿ, ಬೇಗ ಹಾಳಾಗದಂತೆ, ಫಂಗಸ್‌ಗೆ ತುತ್ತಾಗದಂತೆ ತುಸು ಕೆಮಿಕಲ್ ಮಿಶ್ರಣ ಮಾಡಿ ಸುಲಭವಾಗಿ ತಯಾರಿಸಬಹುದು ಎನ್ನುತ್ತಾರೆ ಪ್ರದರ್ಶನದಲ್ಲಿದ್ದ ವಿದ್ಯಾರ್ಥಿಗಳು.

**ಚರಂಡಿ ನೀರಿನಿಂದ ಗೊಬ್ಬರ:** ಚರಂಡಿ ನೀರನ್ನು ರೋಗ ನಿರೋಧಕ ಶಕ್ತಿಯುಳ್ಳ ನೀರನ್ನಾಗಿ ಪರಿವರ್ತಿಸಿ, ಗಿಡಗಳಿಗೆ ಹಾಕಬಹುದು ಎಂಬ ತಂತ್ರಜ್ಞಾನ ಪರಿಚಯಿಸಿದ್ದು, ಮೆಕ್ಯಾನಿಕಲ್ ವಿಭಾಗದ ಮಂಜುಳಾ ಹಾಗೂ ಆಶಿಶ್.

**ನರ್ಸರಿಯಲ್ಲಿ ಸಿ ಪ್ರೋಗ್ರಾಂ:** ಮೊಬೈಲ್ ಮೂಲಕ ಕಂಟ್ರೋಲ್ ಮಾಡಬಹುದಾದ ಆಟೋ ಮ್ಯಾಟಿಕ್ ನೀರಾವರಿ ಪದ್ಧತಿಯನ್ನು ಸಿವಿಲ್ ವಿಭಾಗದ ವಿದ್ಯಾರ್ಥಿಗಳು ಪರಿಚಯಿಸಿದರು. ನರ್ಸರಿಯಲ್ಲಿ ಬೀಜ ಬಿತ್ತನೆ, ನೀರು ಸಿಂಪರಣೆ, ಔಷಧಿ ಬಳಕೆ ಹೀಗೆ ಎಲ್ಲವನ್ನೂ ವೈಜ್ಞಾನಿಕವಾಗಿ ಮಾಡುವ ರೋಬೋಟ್ ತಯಾರಿಸಿದ್ದು ವಿದ್ಯಾರ್ಥಿಗಳಾದ ಗಗನ್, ಗೌರಂಗ್, ಕುನಾಲ್ ಸಂಗಡಿಗರು. ರೋಬೋಟ್‌ನಲ್ಲಿ ನಿಗದಿಯಂತೆ ಪ್ರೋಗ್ರಾಂ ಅಳವಡಿಸಿದರೆ, ಪ್ರತಿ ದಿನ ರೋಬೋಟ್ ತನ್ನ ಕೆಲಸ ಮಾಡುತ್ತದೆ. ಇದರಿಂದ ದೈಹಿಕ ಶ್ರಮ ಕಡಿಮೆ ಮಾಡಿಕೊಳ್ಳಬಹುದು ಎನ್ನುವುದು ವಿದ್ಯಾರ್ಥಿಗಳ ಮಾತು. ಹೀಗೆ ಸುಮಾರು 60 ಯೋಜನೆಗಳನ್ನು ಟೆಕ್ನೋವೇಷನ್ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು.



### ಶೇ.62ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ

ದಾವಣಗೆರೆ, ಸೆ.4- ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ಶೇ.62ರಷ್ಟು ವಿದ್ಯಾರ್ಥಿಗಳು ಕಾಲೇಜು ಅವಧಿ ಪೂರ್ಣಗೊಳ್ಳುವುದರೊಳಗೆ ವಿವಿಧ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ. 2021 ರಲ್ಲಿ 333 ವಿದ್ಯಾರ್ಥಿಗಳು ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಹೇಳಿದರು.

ಮಹಾವಿದ್ಯಾಲಯದ ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನದ ಉದ್ಘಾಟನೆಗೂ ಮುನ್ನ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಪ್ರಸ್ತುತ ಮಹಾವಿದ್ಯಾಲಯದಲ್ಲಿ ಏರ್ಪಡಿಸಿರುವ ಟೆಕ್ನೋವೇಷನ್-21 ಪ್ರದರ್ಶನದಲ್ಲಿನ 60 ಯೋಜನೆಗಳು ಪ್ರದರ್ಶಿತಗೊಳ್ಳಲಿವೆ. ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಯು 24 ಪ್ರಸ್ತಾವನೆಗಳನ್ನು ಅತ್ಯುತ್ತಮವೆಂದು ಪರಿಗಣಿಸಿ ಹಣಕಾಸಿನ ನೆರವು ನೀಡಿದೆ



ಎಂದರು. ಕರ್ನಾಟಕ ಸರ್ಕಾರದ ನ್ಯೂ ಏಜ್ ಇನ್‌ಕ್ಯೂಬೇಷನ್ ನೆಟ್‌ವರ್ಕ್ 10 ಯೋಜನೆಗಳಿಗೆ ಹಾಗೂ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ 20 ಯೋಜನೆಗಳನ್ನು ಗುರುತಿಸಿ ಹಣಕಾಸಿನ ನೆರವು ನೀಡಿದೆ. ಜೊತೆಗೆ ಬಿಐಇಟಿ ವತಿಯಿಂದ 15 ಯೋಜನೆಗಳಿಗೆ ಹಣಕಾಸಿನ ನೆರವು ನೀಡಲಾಗಿದ್ದು, ಒಟ್ಟು ಸುಮಾರು 30 ಲಕ್ಷ ರೂ. ಹಣಕಾಸಿನ ನೆರವು ಈ ವರ್ಷ ವಿದ್ಯಾರ್ಥಿಗಳಿಗೆ ದೊರೆತಿರುವುದಾಗಿ ಅವರು ತಿಳಿಸಿದರು.

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ. ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಹೊಳಿ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಬಿ.ಪಿ. ದೇಸಾಯಿ, ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಡೀನ್ ಶಂಕರಮೂರ್ತಿ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಕೋವಿಡ್ ಸಂಕಷ್ಟಕಾಲದಲ್ಲಿ ವಿದ್ಯಾರ್ಥಿಗಳು ಪೂರ್ಣಗೊಳಿಸಿದ್ದ ಬೃಹತ್ ಪ್ರಾಜೆಕ್ಟ್ ವರ್ಕ್‌ಗಳು

# ಬಿಐಇಟಿ ಕಾಲೇಜಿನಲ್ಲಿ ಪ್ರಾಜೆಕ್ಟ್ ಪ್ರದರ್ಶನ

**ದಾವಣಗೆರೆ:** ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ರೂಪಿಸಿದ್ದ ಪ್ರಾಜೆಕ್ಟ್ ವರ್ಕ್‌ಗಳ ಬೃಹತ್ ಪ್ರದರ್ಶನವನ್ನು ಶನಿವಾರ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿತ್ತು.

ಕಾಲೇಜಿನ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಿವಿಲ್ ಹೀಗೆ ಅನೇಕ ವಿಭಾಗದ ವಿದ್ಯಾರ್ಥಿಗಳು ಕೋವಿಡ್ ಸಂಕಷ್ಟ ಕಾಲದಲ್ಲಿ ಪೂರ್ಣಗೊಳಿಸಿದ್ದ ತಮ್ಮ ಪ್ರಾಜೆಕ್ಟ್‌ಗಳನ್ನು ಕಾಲೇಜು ಆವರಣದ ಎಸ್.ಎಸ್.ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಟೆಕ್ನೋವೇಷನ್-21 ಶೀರ್ಷಿಕೆಯಡಿ ಪ್ರದರ್ಶನಕ್ಕೆ ಇಡಲಾಗಿತ್ತು. ದೇಶದ ಭದ್ರತೆ, ಕೊರೋನಾ ಸುರಕ್ಷತೆ, ರೈತಸ್ನೇಹಿ, ಪರಿಸರಸ್ನೇಹಿ ಹೀಗೆ ಪತ್ತು ಹಲವು ಥೀಮ್ ಹೊಂದಿದ್ದ ಸುಮಾರು 60 ಪ್ರಾಜೆಕ್ಟ್‌ಗಳು ಎಲ್ಲರ ಗಮನ ಸೆಳೆದವು.

ಪರಿಸರಕ್ಕೆ ಹಾನಿಯಾಗದ ಅಡಿಕೆ ಸಿಪ್ಪೆಯ ನಾರಿನಿಂದ ಸ್ಯಾನಿಟರಿ ನ್ಯಾಪ್ಕಿನ್, ಮೀನುಗಾರಿಕೆಗೆ ನೀರಿನ ಪಿಹೆಚ್ ಮಟ್ಟ ಆಮ್ಲಜನಕ ಹಾಗೂ ತಾಪಮಾನ ಮಾಹಿತಿ ನೀಡುವ ವ್ಯವಸ್ಥೆ ಮಿನಿ ರೋಬೋಟ್ ಮಾದರಿ ಯಂತ್ರಗಳು, ಅಡಿಕೆ ಪಟ್ಟೆಗಳನ್ನು ಬಳಸಿ ತಯಾರಿಸಿರುವ ಆಕರ್ಷಕ ಹ್ಯಾಂಡ್ ಬ್ಯಾಗ್, ಕೋವಿಡ್ ಹರಡದಂತೆ ಮುನ್ನೆಚ್ಚರಿಕೆಯ ವಿಶಿಷ್ಟ ಬ್ಯಾಂಡ್ ಹಾಗೂ ದತ್ತಾಂಶ ಸಂಗ್ರಹಿಸುವ ಸಾಫ್ಟ್‌ವೇರ್, ಕೃಷಿ ಇಳುವರಿ ಹೆಚ್ಚಿಸಲು ಹಣ್ಣಿನ ಸಿಪ್ಪೆಗಳಿಂದ ತಯಾರಿಸಿದ ಕೀಟನಾಶಕ ಹಾಗೂ ಗ್ರೋಥ್ ಟಾನಿಕ್ ಮುಂತಾದ ನವೀನ ಆವಿಷ್ಕಾರದ ಯೋಜನೆ ಮಾದರಿಗಳು ಪ್ರದರ್ಶನದಲ್ಲಿ ಕಂಡು ಬಂದವು.



> “ಪ್ರಸ್ತುತ ವರ್ಷ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು 24 ಪ್ರಸ್ತಾವನೆಗಳನ್ನು ಅತ್ಯುತ್ತಮವೆಂದು ಪರಿಗಣಿಸಿ ಹಣಕಾಸು ನೆರವು ನೀಡಿದೆ. ಸರ್ಕಾರದ ನ್ಯೂ ಏಜ್ ಇನ್ಕ್ಯುಬೇಷನ್ ನೆಟ್‌ವರ್ಕ್‌ನಿಂದ 10, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ 20 ಪ್ರಾಜೆಕ್ಟ್‌ಗಳಿಗೆ ಆರ್ಥಿಕ ನೆರವು ಸಿಕ್ಕಿದೆ. ಉತ್ತಮವಾದ 15 ಪ್ರಾಜೆಕ್ಟ್‌ಗಳಿಗೆ ನಮ್ಮ ಕಾಲೇಜಿನಿಂದ ನೆರವು ಒದಗಿಸಿದ್ದು ಒಟ್ಟು 30 ಲಕ್ಷ ರೂ. ಹಣಕಾಸಿನ ನೆರವು ಈ ವರ್ಷ ವಿದ್ಯಾರ್ಥಿಗಳಿಗೆ ದೊರೆತಿದೆ.
>
> ■ ಡಾ.ಹೆಚ್.ಬಿ.ಅರವಿಂದ್, ಬಿಐಇಟಿ ಪ್ರಾಂಶುಪಾಲರು

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಮುದಿಗೌಡ್ರ ಪ್ರಾಜೆಕ್ಟ್ ಎಕ್ಸಿಬಿಷನ್ ಉದ್ಘಾಟಿಸಿದರು. ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಹೊಳಿ, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಪ್ರಾಚಾರ್ಯ ಡಾ.ಹೆಚ್.ಬಿ.ಅರವಿಂದ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜೆ.ಪಿ.ದೇಸಾಯಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕಿರು ಸುದ್ದಿ




**ದಾವಣಗೆರೆ :** ನಗರದಲ್ಲಿ ಶನಿವಾರ ಬೆಳಗ್ಗೆ ಪತ್ರಿಕಾ ವಿತರಕರ ದಿನವನ್ನು ಸರಳವಾಗಿ ಆಚರಿಸಲಾಯಿತು. ಹಿರಿಯ ಪತ್ರಿಕಾ ವಿತರಕರಾದ ಮಹಾರುದ್ರಪ್ಪ ಮಂಜುನಾಥ, ಪ್ರದೀಪ್, ಆನಂದ್, ನಿಂಗಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ


**ದಾವಣಗೆರೆ:** ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಭೈರತಿ ಸೆ.5ರಂದು 10 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಿರುವ ಶಿಕ್ಷಕರ ದಿನಾಚರಣೆ ಸಮಾರಂಭದಲಿ

■ ಟೆಕ್ನೋವೇಷನ್- 21 ತಾಂತ್ರಿಕ ಯೋಜನೆಗಳ ಪ್ರದರ್ಶನ ■ ವಿದ್ಯಾರ್ಥಿಗಳಿಂದ 60 ಪ್ರಾಜೆಕ್ಟ್ ಆವಿಷ್ಕಾರ

# ಬಿಐಇಟಿ ಕ್ಯಾಂಪಸ್‌ನಲ್ಲಿ ತಾಂತ್ರಿಕ ಹಕ್ಕಿಗಳ ಕಲರವ









ಸಂ.ಕ ಸಮಾಚಾರ ದಾವಣಗೆರೆ

ಇಂಜನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾರ್ಥಿಗಳ ಸಂಭ್ರಮ ಎಲ್ಲೆ ಮೀರಿತ್ತು. ತಾವು ತಯಾರಿಸಿದ ಪ್ರೊಜೆಕ್ಟ್‌ಗಳ ಬಗ್ಗೆ ಕಾರ್ಯಕ್ರಮಕ್ಕೆ ಬಂದಿದ್ದ ಅತಿಥಿಗಳಿಗೆ ಮಾಹಿತಿ ನೀಡಿ ಅವರಿಂದ ಮೆಚ್ಚುಗೆಯ ಮಾತು ಕೇಳಿ ಅವರಲ್ಲಿ ಸಂಭ್ರಮ, ಸಂತಸ ಇನ್ನಷ್ಟು ಇಮ್ಮಡಿಗೊಳಿಸಿತ್ತು.

ಹೌದು, ನಗರದ ಬಿಐಇಟಿ ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ, 'ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನ'ದಲ್ಲಿ ಬಿಐಇಟಿ ವಿದ್ಯಾರ್ಥಿಗಳ ನವೀನ ಹಾಗೂ ಸಾಮಾಜಿಕ ಪ್ರಸ್ತುತಿ ಹೊಂದಿದ ಯೋಜನೆಗಳ ಪ್ರದರ್ಶನ ಕಂಡು ಬಂತು.

ಪ್ರಾರಂಭದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್. ಹೊಳಿ ಟೆಕ್ನೋವೇಷನ್‌ಗೆ ಚಾಲನೆ ನೀಡಿದರು.

ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಮಾತನಾಡಿ, ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶಿಕ್ಷಣದಲ್ಲಿ ಅನೇಕ ವಿಷಯ ಅಧ್ಯಯನ ಮಾಡಿ ಅಂತಿಮವಾಗಿ ಈ ಎಲ್ಲಾ ವಿಷಯಗಳ ಜ್ಞಾನ ವಿವಿಧ ಯೋಜನೆ ರೂಪಿಸಿ ನವೀನ ಆವಿಷ್ಕಾರಗಳಿಗೆ ಕಾರಣರಾಗಿದ್ದಾರೆ. ಬಿಐಇಟಿ ಅಂತಿಮ ವರ್ಷದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಕೊರೊನಾ ಸಂಕಷ್ಟದ ನಡುವೆಯೂ ಅನೇಕ ನವೀನ ಹಾಗೂ ಸಮಾಜಕ್ಕೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ ಸಮಾಜಕ್ಕೆ ಕೊಡುಗೆಯಾಗಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಶ್ಲಾಘಿಸಿದರು.



ದಾವಣಗೆರೆ ಬಿಐಇಟಿ ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ 'ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನ'ದ ಉದ್ಘಾಟನಾ ಸಮಾರಂಭ ನಡೆಯಿತು.

ಪ್ರಸ್ತುತ ವರ್ಷ ವಿದ್ಯಾರ್ಥಿಗಳು ಸಲ್ಲಿಸಿದ್ದ ಯೋಜನಾ ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ(ಕೆಎಸ್‌ಸಿಎಸ್‌ಟಿ)ಯು 24 ಪ್ರಸ್ತಾವನೆ ಅತ್ಯುತ್ತಮ ಎಂದು ಪರಿಗಣಿಸಿ ಹಣಕಾಸು ನೆರವು ನೀಡಿದೆ. ಅದೇ ರೀತಿ ರಾಜ್ಯ ಸರ್ಕಾರದ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್ವರ್ಕ್- 10 ಯೋಜನೆ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ 20 ಅತ್ಯುತ್ತಮ ಯೋಜನೆಗಳು ಎಂದು ಗುರುತಿಸಿ ಹಣಕಾಸಿನ ನೆರವು ನೀಡಿವೆ. ಜೊತೆಗೆ ಉತ್ತಮ 15 ಯೋಜನೆಗಳಿಗೆ ಬಿಐಇಟಿಯಿಂದ ಹಣಕಾಸಿ ನೆರವು ಸೇರಿ ಒಟ್ಟು 30 ಲಕ್ಷ ರೂ. ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಇಂದು ನಡೆದ ಟೆಕ್ನೋವೇಷನ್ ಪ್ರದರ್ಶನದಲ್ಲಿ ಒಟ್ಟು 60 ಯೋಜನೆ ಪ್ರದರ್ಶಿತಗೊಂಡಿವೆ ಎಂದು ಮಾಹಿತಿ ನೀಡಿದರು.

ಬಿಐಇಟಿ ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜೆ.ಪಿ. ದೇಸಾಯಿ, ಭರತ್ ಅದ್ವಾನಿ, ಡಾ.ಪೂರ್ಣಿಮ ಸೇರಿದಂತೆ ಇನ್ನಿತರರಿದ್ದರು

## ಗಮನ ಸೆಳೆದ ಪ್ರದರ್ಶನಗಳು

ಟೆಕ್ನೋವೇಷನ್- 21 ತಾಂತ್ರಿಕ ಯೋಜನೆಗಳ ಪ್ರದರ್ಶನದಲ್ಲಿ ಬಿಐಇಟಿ ಕಾಲೇಜಿನ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ತಯಾರಿಸಿದ 60 ಯೋಜನೆಗಳ ಪ್ರದರ್ಶನಗಳು ಗಮನ ಸೆಳೆದವು.

ಕುರುಡು ಮತ್ತು ಕಿವುಡರಿಗೆ ವಿನ್ಯಾಸ ಮತ್ತು ಅಭಿವೃದ್ಧಿ ಕಂಪಿಸುವ ಕೋಲು, ಟ್ರಾಫಿಕ್ ಸಿಗ್ನಲ್ ಪೂರ್ವ ತುರ್ತು ವಾಹನಗಳು, 750 ಲೀಟರ್ ಅಥವಾ ನಿಮಿಷ ಡ್ರೈ ರನ್ನಿಂಗ್ ವ್ಯಾನ್ ಟೈಪ್‌ವ್ಯಾಕ್ಯೂಲ್ ಪಂಪ್‌ನ ವಿನ್ಯಾಸ ಮತ್ತು ಅಭಿವೃದ್ಧಿ, ಪರಿಸರ ಸ್ನೇಹಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಅಭಿವೃದ್ಧಿ, ಹುಣಸೆ ಹಣ್ಣಿನ ಬೀಜಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಮೌಲ್ಯವರ್ಧನೆಯೊಂದಿಗೆ ಬಳಸುವ ಯೋಜನೆ, ಸ್ವಯಂ ಚಾಲಿತ ಪಡಿತರ ವಿತರಕ, ಯಂತ್ರ ಕಲಿಕೆಯನ್ನು ಬಳಸಿಕೊಂಡು ಖಿನ್ನತೆ ಮತ್ತು ಪರಿಹಾರ ಶಿಫಾರಸು ವ್ಯವಸ್ಥೆ ಯೋಜನೆ, ಚರಂಡಿ ನೀರನ್ನು ಗೊಬ್ಬರವನ್ನಾಗಿಸಿ ಬೆಳೆಗಳಿಗೆ ಉಪಯೋಗಿಸುವುದು, ಸೀಗಡಿ ಮೀನುಗಾರಿಕೆಗಾಗಿ ಸ್ವಾಯತ್ತ ನೀರೊಳಗಿನ ರೋಬೋಟ್ ಅಭಿವೃದ್ಧಿಗೊಳಿಸುವ ಯೋಜನೆ ಸೇರಿದಂತೆ ಒಟ್ಟು 60 ಯೋಜನೆ ಪ್ರದರ್ಶನ ನಡೆಯಿತು.

## ಭೂಮಾಲೀಕರಿಗೆ ಎಚ್ಚರಿಕೆ ಗಂಟೆ

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಇಂಟರ್ನೆಟ್ ಆಫ್ ಥಿಂಗ್ಸ್ ಮೂಲಕ ಕೃಷಿ ಭೂಮಿ ರಕ್ಷಣೆಗೆ ಕಾಡು ಪ್ರಾಣಿ ಪತ್ತೆ ಮತ್ತು ಎಚ್ಚರಿಸುವ ವ್ಯವಸ್ಥೆ ಕುರಿತು ತಯಾರಿಸಿದ ಪ್ರಾಜೆಕ್ಟ್ ಗಮನ ಸೆಳೆಯಿತು.

ಮಲೆನಾಡು ಭಾಗದಲ್ಲಿ ಕೃಷಿ ಭೂಮಿಗೆ ಆನೆ ದಾಳಿ ಮತ್ತು ಕಾಡು ಪ್ರಾಣಿಗಳ ದಾಳಿಯಿಂದ ಬೆಳೆನಾಶ ಮತ್ತು ಜೀವಹಾನಿ ತಪ್ಪಿಸುವ ಉದ್ದೇಶದಿಂದ ವಿದ್ಯಾರ್ಥಿಗಳಾದ ಅನನ್ಯ ಮಲಾಡ್ಕರ್, ಅರವಿಂದ್ ಚೌಧರಿ, ಸಂದೀಪ್ ಸದಾಶಿವ ನೇರ್ಲಿಕರ್ ಮತ್ತು ಪಿ.ಎಸ್. ಮಹೇಶ್ ಆವಿಷ್ಕರಿಸಿರುವ ಇಂಟರ್ನೆಟ್ ಆಫ್ ಥಿಂಗ್ಸ್ ತಂತ್ರಜ್ಞಾನ ರೈತರಿಗೆ ಉಪಯುಕ್ತವಾಗಿದೆ. ಈ ಪ್ರಾಜೆಕ್ಟ್‌ನ ಯಂತ್ರ ಕಲಿಕೆ ಅಲ್ಗಾರಿದಂ ಮೂಲಕ ಬೆಳೆಹಾನಿ ಮತ್ತು ಜೀವ ಹಾನಿ ಮಾಡುವ ಕಾಡು ಪ್ರಾಣಿಗಳನ್ನು ಗುರುತಿಸಿ, ಛಾಯಾಚಿತ್ರ ತೆಗೆದು ಕೃಷಿ ಭೂಮಿಯ ಮಾಲೀಕರಿಗೆ ಈ-ಮೇಲ್ ರವಾನಿಸುತ್ತದೆ ಹಾಗೂ ಕಾಡು ಪ್ರಾಣಿಯ ಇರುವಿಕೆಯ ಬಗ್ಗೆ ಜೋರಾಗಿ ಅಲಾರ್ಮ್ ಸದ್ದು ಮೊಳಗಿಸುತ್ತದೆ.

## ಬಿಐಇಟಿ ವಿದ್ಯಾರ್ಥಿಗಳ 60ಕ್ಕೂ ಹೆಚ್ಚು ಹೊಸ ಆವಿಷ್ಕಾರ, ಸಂಶೋಧನೆಗಳು

# ಮನೆ ತಂಪಾಗಿರಿಸುವ ಟೈಲ್ಸ್, ಅಡಿಕೆ-ಬಾಳೆ ನಾರಿನಿಂದ ಬಟ್ಟೆ ಉಸಿರಾಡುವ ಇಟ್ಟಿಗೆಗಳು, ಕೀ ಪತ್ತೆ ಹಚ್ಚುವ ಸಾಧನ, ಮಾಸ್ಕ್ ಅಲಾರಾಂ







ದಾ ನಗರವಾಣಿ ಸುದ್ದಿ

ದಾವಣಗೆರೆ, ಸೆ.4: ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಈ ಬಾರಿ 60ಕ್ಕೂ ಹೆಚ್ಚು ಹೊಸ ಆವಿಷ್ಕಾರಗಳು, ಸಂಶೋಧನೆಗಳನ್ನು ಪ್ರಸ್ತುತಪಡಿಸಿದ್ದಾರೆ. ಸಾಮಾನ್ಯ ಜನರಿಗೆ, ವಿಶೇಷವಾಗಿ ರೈತರಿಗೆ ಈ ಪ್ರಾಜೆಕ್ಟ್‌ಗಳು ಅನುಕೂಲವಾಗುವಂತಿವೆ.

ಕೊರೋನಾ ಸಂಕಷ್ಟದ ಈ ಕಾಲದಲ್ಲೂ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾಮಾಜಿಕ ಕಾಳಜಿ ಹೊಂದಿರುವ ಇಂಥ ಪ್ರಾಜೆಕ್ಟ್‌ಗಳನ್ನು ತಯಾರಿಸಿದ್ದು, ಇದರಲ್ಲಿ 24 ಪ್ರಾಜೆಕ್ಟ್‌ಗಳನ್ನು ಅತ್ಯುತ್ತಮವೆಂದು ಪರಿಗಣಿಸಿ ಅವಕ್ಕೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಹಣಕಾಸು ನೆರವು ನೀಡಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ॥ ಹೆಚ್.ಬಿ.ಅರವಿಂದ್, ನಿರ್ದೇಶಕ ವೈ.ವೃಷಬೇಂದ್ರಪ್ಪ ಸುದ್ದಿಗೋಷ್ಠಿಯಲ್ಲಿಂದು ತಿಳಿಸಿದರು.

ಇದೇ ರೀತಿ 20 ಪ್ರಾಜೆಕ್ಟ್‌ಗಳಿಗೆ ವಿ.ಟಿ.ಯು. 15 ಪ್ರಾಜೆಕ್ಟ್‌ಗಳಿಗೆ ತಮ್ಮದೇ ಕಾಲೇಜು ಹಣ ಮಂಜೂರು ಮಾಡಿದೆ ಎಂದರು.

ಈ ಪ್ರಾಜೆಕ್ಟ್‌ಗಳ ಪ್ರದರ್ಶನ 'ಟೆಕ್ನೋವೇಶನ್-21ನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ॥ ಭಾಗ್ಯವಾನ ಮುದಿಗೌಡ್ರ ಶನಿವಾರ ಉದ್ಘಾಟಿಸಿದರು. ಯುಬಿಡಿಟಿ ಪ್ರಾಂಶುಪಾಲ ಡಾ॥ ಮಲ್ಲಿಕಾರ್ಜುನ ಹೊಳಿ ಉಪಸ್ಥಿತರಿದ್ದರು.

ಮನೆ ತಂಪಾಗಿಸುವ ಟೈಲ್ಸ್: ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿದ್ಯಾರ್ಥಿಗಳಾದ ಗಿರಿಜಾಶರ್ಮ ಹಾಗೂ ಪಿಯೂಸ್ ರಂಜನ್ ಅವರು ಮನೆ ಉಷ್ಣಾಂಶವನ್ನು 4 ರಿಂದ 8 ಡಿಗ್ರಿಗಳಷ್ಟು ಕಡಿಮೆ ಮಾಡಬಲ್ಲ ಹೈಡ್ರೋ ಸೆರಾಮಿಕ್ ರೂಫ್ ಟೈಲ್ಸ್‌ಗಳನ್ನು ಆವಿಷ್ಕಾರ ಮಾಡಿದ್ದಾರೆ.

ಈ ಟೈಲ್ಸ್‌ಗಳನ್ನು ಆರ್‌ಸಿಸಿ ಕೆಳಗೆ ಬೀಮ್‌ಗಳ ಮಧ್ಯೆ ಅಳವಡಿಸಿದರೆ ಬೇಸಿಗೆಯಲ್ಲಿ ನಿಮಗೆ ಎಸಿ ಹಾಕಿಕೊಳ್ಳುವ ಅವಶ್ಯಕತೆ ಬಾರದು.

ಬ್ರೀತಿಂಗ್ ಬ್ರಿಕ್ಸ್: ಇದೇ ರೀತಿ ಸಿವಿಲ್ ವಿದ್ಯಾರ್ಥಿಗಳು ಕಾಂಕ್ರೀಟ್ ಇಟ್ಟಿಗೆಗಳ ನಡುವೆ ಗಾಳಿ ಹಾಯಿಸಿ ಮನೆ ಉಷ್ಣಾಂಶವನ್ನು ತಂಪಾಗಿಸುವ ಬ್ರೀತಿಂಗ್ (ಉಸಿರಾಡುವ) ಇಟ್ಟಿಗೆಗಳನ್ನು ತಯಾರಿಸಿದ್ದಾರೆ. ಬೆಲೆಯೂ ಕಡಿಮೆ.

ಅಡಿಕೆ ಸಿಪ್ಪೆಯಿಂದ ಬಟ್ಟೆ: ಅಡಿಕೆ ಸುಲಿದ ಬಳಿಕ ಅದರ ಸಿಪ್ಪೆ ಲಾರಿಗಟ್ಟಲೆ ಬಿದ್ದು ಕೊಳೆತು ಹೋಗುತ್ತದೆ. ಹಾಳಾಗುವ ಆ ಅಡಿಕೆ ಸಿಪ್ಪೆಯ ನಾರಿನಿಂದ ಬಟ್ಟೆ ತಯಾರಿಸುವುದನ್ನು ಟೆಕ್ಸ್‌ಟೈಲ್ ವಿದ್ಯಾರ್ಥಿಗಳು ಸಂಶೋಧಿಸಿದ್ದಾರೆ. ಇದೇ ವಿದ್ಯಾರ್ಥಿಗಳು ಈ ಹಿಂದೆ ಬಾಳೆ ನಾರಿನಿಂದಲೂ ಬಟ್ಟೆ ತಯಾರಿಸಿದ್ದರು. (4ನೇ ಪುಟಕ್ಕೆ)

ಮಹಿಳಾ ಕೂಗು
MAHILA KOOGU
ದಿನಾಂಕ :05-09-2021
DATE :05-09-2021
ಪುಟ : 6
PAGE : 6


# ಬಿಐಇಟಿಯಲ್ಲಿ ತಾಂತ್ರಿಕ ಯೋಜನೆಗಳ ಪ್ರದರ್ಶನಕ್ಕೆ ಚಾಲನೆ

ದಾವಣಗೆರೆ: ರೈತರು ಕಾಡು ಪ್ರಾಣಿಗಳಿಂದ ಬೆಳೆ ಹಾನಿ ಆಗುವುದನ್ನು ತಡೆಯಲು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಇಂಟರ್ನೆಟ್ ಆಫ್ ಥಿಂಗ್ಸ್ ಪ್ರಾಜೆಕ್ಟ್ ಅಭಿವೃದ್ಧಿ ಪಡಿಸಿದ್ದಾರೆ.

ಹೌದು... ಇಲ್ಲಿನ ಬಿಐಇಟಿ ಆವರಣದ ಎಸ್.ಎಸ್.ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಟೆಕ್ನೋವೇಷನ್-21 ತಾಂತ್ರಿಕ ಯೋಜನೆಗಳ ಪ್ರದರ್ಶನದಲ್ಲಿ ಬಿಐಇಟಿ ಕಾಲೇಜಿನ ವಿವಿಧ ವಿಭಾಗಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ತಯಾರಿಸಿದ 60 ಯೋಜನೆಗಳ ಪ್ರದರ್ಶನದಲ್ಲಿ ರೈತರಿಗೆ ಉಪಯುಕ್ತವಾಗುವ ಈ ಪ್ರಾಜೆಕ್ಟ್ ವಿಶೇಷ ಗಮನ ಸಳೆಯಿತು.

ಮಲೆನಾಡು ಭಾಗದಲ್ಲಿ ಕೃಷಿ ಭೂಮಿಗೆ ಆನೆ ದಾಳಿ ಮತ್ತು ಕಾಡು ಪ್ರಾಣಿಗಳ ದಾಳಿಯಿಂದ ಬೆಳೆನಾಶ ಮತ್ತು ಜೀವಹಾನಿ ತಪ್ಪಿಸುವ ಉದ್ದೇಶದಿಂದ ವಿದ್ಯಾರ್ಥಿಗಳಾದ ಅನನ್ಯ ಮಲಾಡ್ಕರ್, ಅರವಿಂದ್ ಚೌಧರಿ, ಸಂದೀಪ್ ಸದಾಶಿವ ನೇರ್ಲಿಕರ್ ಮತ್ತು ಪಿ.ಎಸ್.ಮಹೇಶ್ ಆವಿಷ್ಕರಿಸಿರುವ ಇಂಟರ್ನೆಟ್ ಆಫ್ ಥಿಂಗ್ಸ್ ತಂತ್ರಜ್ಞಾನ ರೈತರಿಗೆ ಉಪಯುಕ್ತವಾಗಿದೆ.

ಈ ಪ್ರಾಜೆಕ್ಟ್‌ನ ಯಂತ್ರ ಕಲಿಕೆ ಅಲ್ಗಾರಿದಂ ಮೂಲಕ ಬೆಳೆಹಾನಿ ಮತ್ತು ಜೀವಹಾನಿ ಮಾಡುವ ಕಾಡು ಪ್ರಾಣಿಗಳನ್ನು ಗುರುತಿಸಿ, ಛಾಯಾಚಿತ್ರ ತೆಗೆದು ಕೃಷಿ ಭೂಮಿಯ ಮಾಲೀಕರಿಗೆ ಇ-ಮೇಲ್ ರವಾನಿಸುತ್ತದೆ ಹಾಗೂ ಕಾಡು ಪ್ರಾಣಿಯ ಇರುವಿಕೆಯ ಬಗ್ಗೆ ಜೋರಾಗಿ ಅಲಾರ್ಮ್ ಸದ್ದು ಮೊಳಗಿಸುತ್ತದೆ.



ಈ ಯೋಜನೆಗೆ ರಾಸ್ಪ್ ಬೆರಿ ಪೈ ಎಂಬ ಕ್ರೆಡಿಟ್ ಕಾರ್ಡ್ ಗಾತ್ರದ ಚಿಕ್ಕ ಗಣಕಯಂತ್ರ ಬಳಸಲಾಗಿದೆ. ಕಾಡು ಪ್ರಾಣಿಗಳ ಚಟುವಟಿಕೆಯನ್ನು ಗಮನಿಸಲು ಪ್ಯಾಸಿವ್ ಇನ್ಫ್ರಾರೆಡ್ ಸಂವೇದಕ ಉಪಯೋಗಿಲಾಗಿದೆ. ಪೈಥಾನ್ ಪ್ರೋಗ್ರಾಂ ಮೂಲಕ ಈ ಸಂವೇದಕದ ಡೇಟಾವನ್ನು ವಿಶ್ಲೇಷಣೆ ಮಾಡಿ, ರಾಸ್ಪ್ ಬೆರಿ ಪೈ ಗಣಕಯಂತ್ರಕ್ಕೆ ಜೋಡಿಸಿರುವ ಕ್ಯಾಮೆರಾದಲ್ಲಿ ಕಾಡು ಪ್ರಾಣಿಯ ಚಿತ್ರ ಸೆರೆಹಿಡಿದು ಕೃಷಿ ಭೂಮಿ ಮಾಲೀಕರಿಗೆ ಸಂದೇಶ ರವಾನಿಸಲಿದ್ದು, ಇದರಿಂದ ಎಚ್ಚೆತ್ತುಕೊಳ್ಳುವ ರೈತರು ಕಾಡು ಪ್ರಾಣಿಗಳಿಂದಾಗುವ ಬೆಳೆ ಹಾನಿಯನ್ನು ರಕ್ಷಿಸಿಕೊಳ್ಳಲು ಸಹಕಾರಿಯಾಗಿದೆ ಎಂದು ವಿದ್ಯಾರ್ಥಿಗಳು ವಿವವರಣೆ ನೀಡಿದರು.

**ಗಮನ ಸೆಳೆದ ಪ್ರಾಜೆಕ್ಟ್‌ಗಳು:** ಇನ್ನು ಪ್ರದರ್ಶನದಲ್ಲಿ ಕುರುಡು ಮತ್ತು ಕಿವುಡರಿಗೆ ವಿನ್ಯಾಸ ಮತ್ತು ಅಭಿವೃದ್ಧಿ ಕಂಪಿಸುವ ಕೋಲು, ಟ್ರಾಫಿಕ್ ಸಿಗ್ನಲ್ ಪೂರ್ವ ತುರ್ತು ವಾಹನಗಳು, 750 ಲೀಟರ್ ಅಥವಾ ನಿಮಿಷ ಡ್ರೈ ರನ್ನಿಂಗ್ ವ್ಯಾನ್ ಟೈಪ್‌ವ್ಯಾಕ್ಯೂಲ್ ಪಂಪ್‌ನ ವಿನ್ಯಾಸ ಮತ್ತು ಅಭಿವೃದ್ಧಿ, ಪರಿಸರ ಸ್ನೇಹಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಅಭಿವೃದ್ಧಿ, ಹುಣಸೆ ಹಣ್ಣಿನ ಬೀಜಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಮೌಲ್ಯವರ್ಧನೆಯೊಂದಿಗೆ ಬಳಸುವ ಯೋಜನೆ, ಸ್ವಯಂ ಚಾಲಿತ ಪಡಿತರ ವಿತರಕ, ಯಂತ್ರ ಕಲಿಕೆಯನ್ನು ಬಳಸಿಕೊಂಡು ಖಿನ್ನತೆ ಮತ್ತು ಪರಿಹಾರ ಶಿಫಾರಸು ವ್ಯವಸ್ಥೆ ಯೋಜನೆ, ಚರಂಡಿ ನೀರನ್ನು ಗೊಬ್ಬರವನ್ನಾಗಿಸಿ ಬೆಳೆಗಳಿಗೆ ಉಪಯೋಗಿಸುವುದು, ಸೀಗಡಿ ಮೀನುಗಾರಿಕೆಗಾಗಿ ಸ್ವಾಯತ್ತ ನೀರೊಳಗಿನ ರೋಬೋಟ್ ಅಭಿವೃದ್ಧಿಗೊಳಿಸುವ ಯೋಜನೆ ಗಮನ ಸೆಳೆದವು.

ಪ್ರಾರಂಭದಲ್ಲಿ, ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಮುದಿಗೌಡ್ರ, ಯುಬಿಡಿಟಿ ಕಾಲೇಜಿನ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್.ಹೊಳಿ ಟೆಕ್ನೋವೇಷನ್‌ಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ.ಅರವಿಂದ, ತಾಂತ್ರಿಕ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶಿಕ್ಷಣದಲ್ಲಿ ಅನೇಕ ವಿಷಯ ಅಧ್ಯಯನ ಮಾಡಿ ಅಂತಿಮವಾಗಿ ಈ ಎಲ್ಲಾ ವಿಷಯಗಳ ಜ್ಞಾನವನ್ನು ವಿವಿಧ ಯೋಜನೆಗಳನ್ನು ರೂಪಿಸಿ ನವೀನ ಆವಿಷ್ಕಾರಗಳಿಗೆ ಕಾರಣರಾಗಿದ್ದಾರೆ. ಬಿಐಇಟಿ ಅಂತಿಮ ವರ್ಷದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಕೊರೊನಾ ಸಂಕಷ್ಟದ ನಡುವೆಯೂ ಅನೇಕ ನವೀನ ಹಾಗೂ ಸಮಾಜಕ್ಕೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ ಸಮಾಜಕ್ಕೆ ಕೊಡುವೆಯಾಗಿ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಬಿಐಇಟಿ ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜೆ.ಪಿ.ದೇಸಾಯಿ, ಭರತ್ ಅದ್ವಾನಿ, ಡಾ.ಪೂರ್ಣಿಮ ಸೇರಿದಂತೆ ಇನ್ನಿತರರಿದ್ದರು.

# ಅಡಿಕೆ ಮರದ ತ್ಯಾಜ್ಯದಿಂದ ತಯಾರಾಗಿದೆ ಸುಂದರ ಬ್ಯಾಗ್; ಪ್ಲಾಸ್ಟಿಕ್ ನಿಷೇಧಕ್ಕೆ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ನೂತನ ಯೋಜನೆ

ದಾವಣಗೆರೆ ಬಿಐಟಿ ಇಂಜಿನೀಯರಿಂಗ್ ಕಾಲೇಜು ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸುನಿಲ್.ಎಸ್ ಹಾಗೂ ಮಂಜುನಾಥ.ಎಚ್ ಸಿದ್ಧಪಡಿಸಿದ ಬ್ಯಾಗ್ ಗಳು ಪ್ಲಾಸ್ಟಿಕ್ ವಿರೋಧಿಗಳಾಗಿವೆ.

- **TV9KANNADA WEB TEAM**
- Publish Date - 11:51 am, Sun, 5 September 21Edited By: preethi shettigar




ಅಡಿಕೆ ಮರದ ತ್ಯಾಜ್ಯದಿಂದ ತಯಾರಾಗಿದೆ ಸುಂದರ ಬ್ಯಾಗ್

**ದಾವಣಗೆರೆ: ಬಹುತೇಕರು ಪ್ಲಾಸ್ಟಿಕ್ ನಿಷೇಧ ಮಾಡಿ ಎನ್ನುತಾರೆಯೇ ವಿನಃ ಅದಕ್ಕೆ ಪರ್ಯಾಯ ಏನು ಎಂದು ಕೇಳಿದರೆ ಉತ್ತರವೇ ನೀಡಲ್ಲ. ಆದರೆ ಇಲ್ಲೊಂದಿಬ್ಬರು ಹಳ್ಳಿಯ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಪ್ಲಾಸ್ಟಿಕ್‌ಗೆ ಹೇಗೆ ಸೆಡ್ಡು ಹೊಡೆಯಬಹುದು ಎಂಬುದನ್ನು ಮಾಡಿ ತೋರಿಸಿದ್ದಾರೆ. ಮೇಲಾಗಿ ಒಮ್ಮೆ ನೀವು 20 ರೂಪಾಯಿ ಬಂಡವಾಳ ಹಾಕಿದರೆ ಸಾಕು ಆರು**

**ತಿಂಗಳಿಯಿಂದ ಮೂರು ವರ್ಷದ ವರೆಗೆ ನಿಶ್ಚಿಂತೆಯಿಂದ ಇರಬಹುದು. ಅಷ್ಟರ ಮಟ್ಟಿಗೆ ಈ ಬ್ಯಾಗ್‌ಗಳು ಪ್ರಯೋಜನಕ್ಕೆ ಬರುತ್ತದೆ.**
ಆಕರ್ಷಕ ಬಣ್ಣದಿಂದ ಕೂಡಿದ ಈ ಚೀಲಗಳನ್ನು ಅಡಿಕೆ ಮರದ ತ್ಯಾಜ್ಯದಿಂದ ತಯಾರಿಸಲಾಗಿದೆ. ಈ ವಿಶಿಷ್ಟ ಶೈಲಿಯ ಬ್ಯಾಗ್ ಕೈಯಲ್ಲಿ ಹಿಡಿದುಕೊಳ್ಳುವುದೇ ಒಂದು ಸಂತಸದ ವಿಚಾರ. ನೂರಾರು ರೂಪಾಯಿ ವೆಚ್ಚ ಮಾಡಿ ತಂದ ಚೀಲಗಳಿಗೆ ಸವಾಲು ಎನ್ನುವಂತಿವೆ ಈ ಬ್ಯಾಗ್‌ಗಳು. ನಾಲ್ಕು ಮಾದರಿಯಲ್ಲಿ ಈ ಬ್ಯಾಗ್‌ಗಳು ಸದ್ಯಕೆ ಸಜ್ಜಾಗಿವೆ. ಜತೆಗೆ ಈ ಸುಂದರ ಬ್ಯಾಗ್‌ಗಳ ಬೆಲೆ ಕೇವಲ 20 ರೂಪಾಯಿ ಮಾತ್ರ.

ದಾವಣಗೆರೆ ಬಿಐಟಿ ಇಂಜಿನೀಯರಿಂಗ್ ಕಾಲೇಜು ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸುನಿಲ್.ಎಸ್ ಹಾಗೂ ಮಂಜುನಾಥ.ಎಚ್ ಸಿದ್ಧಪಡಿಸಿದ ಬ್ಯಾಗ್‌ಗಳು ಪ್ಲಾಸ್ಟಿಕ್ ವಿರೋಧಿಗಳಾಗಿವೆ. ಸುನೀಲ್ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಅಂಕಸಮುದ್ರ ಗ್ರಾಮದ ನಿವಾಸಿ. ಮಂಜುನಾಥ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ರಾಜನಹಟ್ಟಿ ಗ್ರಾಮದ ನಿವಾಸಿ. ಇವರಿಬ್ಬರು ಸೇರಿ ಅಡಿಕೆ ಮರದ ತ್ಯಾಜ್ಯದಿಂದ ಇಂತಹ ಬ್ಯಾಗ್‌ಗಳನ್ನು ಸಿದ್ಧಮಾಡಿದ್ದಾರೆ.

ರೈತರು ಅಡಿಕೆ ಮರದ ತ್ಯಾಜ್ಯಗಳನ್ನು ಸುಮ್ಮನೆ ಸುಟ್ಟು ಹಾಕುತ್ತಾರೆ. ಇದನ್ನು ಬಳಸಿಕೊಂಡು ಈ ರೀತಿಯಾದ ಬ್ಯಾಗ್ ಮಾಡಿದ್ದು, ಪ್ಲಾಸ್ಟಿಕ್‌ಗೆ ಸವಾಲ್ ಹಾಗೂ ಪ್ಲಾಸ್ಟಿಕ್ ನಿಷೇಧಕ್ಕೆ ಪರ್ಯಾಯ ಏನು ಎಂಬುವುದಕ್ಕೆ ಉತ್ತರವಾಗಿದೆ ಎಂದು ಇಂಜಿನೀಯರಿಂಗ್ ವಿದ್ಯಾರ್ಥಿ ಸುನೀಲ್. ಎಸ್ ತಿಳಿಸಿದ್ದಾರೆ.

ಈ ಬ್ಯಾಗ್ ಆರು ತಿಂಗಳಿಂದ ಮೂರು ವರ್ಷದವರೆಗೆ ತರಕಾರಿ ಹಾಕಲು, ಸಣ್ಣ ಪುಟ್ಟ ಸಂತೆಗಳಿಗೆ ಹೋಗುವಾಗ ಬಳಸಬಹುದು. ಮೇಲಾಗಿ ಇದನ್ನು ನೀರಿನಲ್ಲಿ ಅದ್ದಿದರು ಸಹ ಹಾಳಾಗದಂತೆ ಕೆಮಿಕಲ್ ಬಳಸಲಾಗಿದೆ. ಒಂದು ಬ್ಯಾಗ್ ಸಿದ್ಧ ಪಡಿಸಲು 20 ರೂಪಾಯಿ ಮಾತ್ರ ಎಂಬುವುದೇ ವಿಶೇಷ. ಜನಸಾಮಾನ್ಯರ ಕೈಗೆ ತಲುಪಬೇಕಾದರೆ ಅಲ್ಲಿ ದರ ಪ್ರಮಾಣ ಮಹತ್ವದ ಪಾತ್ರ ವಹಿಸುತ್ತದೆ.

ಈ ಬ್ಯಾಗ್‌ಗಳನ್ನು ಗುಜರಾತ್‌ನ ದೇಶಿಕೌಶಲ್ಯ ಕಚೇರಿಗೆ ಕಳುಹಿಸಲಾಗಿದೆ. ಇವರಿಂದಲೇ ಇನ್ನಷ್ಟು ಬೇಡಿಕೆ ಬರುವ ಸಾಧ್ಯತೆಗಳಿವೆ. ಮೇಲಾಗಿ ಇದನ್ನು ಇಷ್ಟರಲ್ಲಿಯೇ ಪ್ರಧಾನಿ ನರೇಂದ್ರ ಮೋದಿಗೂ ಕಳುಹಿಸಲು ಸಹ ನಿರ್ಧರಿಸಲಾಗಿದೆ. ಅಲ್ಲದೆ ದಾವಣಗೆರೆ ಪ್ರತಿಷ್ಠಿತ ಬಿಐಇಟಿ ಇಂಜಿನೀಯರಿಂಗ್ ಕಾಲೇಜ್‌ನ ವಿದ್ಯಾರ್ಥಿಗಳ ಈ ಸಾಧನೆ ಮೆಚ್ಚಲೇಬೇಕು.

ಇದೊಂದೆ ಅಲ್ಲ. ಶೇಖಡಾ 67 ರಷ್ಟು ಇಲ್ಲಿ ಓದಿದ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಕ್ಕಿವೆ. ವಿವಿಧ ವಿಚಾರಗಳ ಬಗ್ಗೆ ಸಂಶೋಧನೆ ಮಾಡಲು ರಾಜ್ಯ ಹಾಗೂ ಕೇಂದ್ರ

ಸರ್ಕಾರಗಳು ಈ ಒಂದೇ ವರ್ಷ ಸುಮಾರು 60 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಿದೆ ಎಂದು ಬಿಐಇಟಿ ಇಂಜಿನೀಯರಿಂಗ್ ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಎಚ್.ಬಿ.ಅರವಿಂದ್ ತಿಳಿಸಿದ್ದಾರೆ.

ಹಳ್ಳಿ ಹುಡುಗರು ಅಡಿಕೆ ತೋಟದಲ್ಲಿ ಸುತ್ತಾಡಿ ಕಸದಿಂದ ರಸ ಎಂಬ ಕಲ್ಪನೆಯಲ್ಲಿ ಸಜ್ಜು ಮಾಡಿದ ಬ್ಯಾಗ್‌ಗಳು ಜನರ ಗಮನ ಸೆಳೆದಿವೆ. ಪ್ಲಾಸ್ಟಿಕ್ ನಿಷೇಧ ಮಾಡಿ ಎಂದು ಮಾತ್ರ ಹೇಳುತ್ತಾರೆ. ಆದರೆ ಈ ಯುವಕರು ಅದಕ್ಕೆ ಪರ್ಯಾಯ ವ್ಯವಸ್ಥೆ ಕೂಡಾ ಕಂಡು ಕೊಂಡಿದ್ದಾರೆ. ಮೇಲಾಗಿ ಪ್ಲಾಸ್ಟಿಕ್ ಬಳಸಿ ಬಿಸಾಕಿದರೆ ಇದು ಕರಗಲ್ಲ. ಆದರೆ ಈ ಅಡಿಕೆ ಬ್ಯಾಗ್ ಮಾತ್ರ ಭೂಮಿಗೆ ಹಾಕಿದರೆ ಗೊಬ್ಬರ ಕೂಡಾ ಆಗುತ್ತದೆ ಎಂಬುವುದು ಒಂದು ರೀತಿ ಮಹತ್ವದ ವಿಚಾರ ಅಂದರೆ ತಪ್ಪಾಗಲಿಕ್ಕಿಲ್ಲ.

**ವರದಿ: ಬಸವರಾಜ್ ದೊಡ್ಮನಿ**